ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

EMAIL : dairyadadaari@gmail.com ಸಂಪುಟ: 01 ಸಂಚಿಕೆ: 56

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಬುಧವಾರ: 04-02-2026

## ಮಾನ್ವಿ: ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ಫಕ್ಕೀರಪ್ಪ ಶೈಕ್ಷಣಿಕ ಸೇವೆ ಸ್ಮರಣೀಯ



ಧೈರ್ಯದ ದಾರಿ

**ಮಾನ್ವಿ,ಫೆ.3–**ಸರ್ಕಾರಿ ನೌಕರಿಯಿಂದ ನಿವೃತ್ತರಾದ ನಂತರ ಪ್ರಾಥಮಿಕ ಶಾಲಾ ಹಂತದಿಂದ ಪದವಿ ಕಾಲೇಜುಗಳವರೆಗೆ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಭವಿಷ್ಯ ರೂಪಿಸಿದ ದಿವಂಗತ ಫಕ್ಕೀರಪ್ಪ ಓಲೇಕಾರ ಅವರ ಶೈಕ್ಷಣಿಕ ಸೇವೆ ಚಿರಸ್ಮರಣೀಯ' ಎಂದು ತಾಲ್ಲೂಕು ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಬಿ.ಕೆ.ಅಮರೇಶಪ್ಪ ವಕೀಲ ಹೇಳಿದರು.

ಮಂಗಳವಾರ ಪಟ್ಟಣದ ವೆಂಕಟೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಎಸ್.ಎಂ.ವಿ ಓಲೇಕಾರ ಪಿಯು ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಸಂಸ್ಥೆಯ ಸಂಸ್ಥಾಪಕ ಫಕ್ಕೀರಪ್ಪ ಓಲೇಕಾರ ಅವರ ಜನ್ಮ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

' ವಿದ್ಯಾರ್ಥಿಗಳು ಅಧ್ಯಯನದಲ್ಲಿ ಆಸಕ್ತಿ ಹಾಗೂ ಪರಿಶ್ರಮದಿಂದ ಉನ್ನತ ಸಾಧನೆ ಮಾಡಿ ಹೆತ್ತ ತಂದೆ, ತಾಯಿ ಹಾಗೂ ಶಿಕ್ಷಣ ಸಂಸ್ಥೆಗೆ ಕೀರ್ತಿ ತರಬೇಕು' ಎಂದು ಅವರು ಸಲಹೆ ನೀಡಿದರು.

ಸಂಸ್ಥೆಯ ಹಳೆಯ ವಿದ್ಯಾರ್ಥಿ ಸಿನಿಮಾ ನಟ ಹನುಮಂತ ಉದ್ಬಾಳ, ಪ್ರಾಧ್ಯಾಪಕ ಪ್ರೊ.ಸೈಯದ್ ಮಿನಾಜುಲ್ ಹಸನ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸುರೇಶ ಕುರ್ಡಿ, ಹಿರಿಯ ಪತ್ರಕರ್ತ ಬಸವರಾಜ ಭೋಗಾವತಿ ಮತ್ತಿತರರು ಮಾತನಾಡಿದರು.

ಪ್ರಾಚಾರ್ಯೆ ಶ್ರೀದೇವಿ ವೆಂಕಟೇಶ ಓಲೇಕಾರ ಸಂಸ್ಥೆಯ ಪ್ರಗತಿ ವರದಿ ಮಂಡಿಸಿದರು.

ವಿದ್ಯಾರ್ಥಿಗಳು ಅನಿಸಿಕೆ ವ್ಯಕ್ತಪಡಿಸಿದರು.

ಸಂಸ್ಥೆಯ ಅಧ್ಯಕ್ಷ ಮಹಾಂತೇಶ ಓಲೇಕಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮುದುಕಮ್ಮ ಫಕ್ಕೀರಪ್ಪ ಓಲೇಕಾರ, ನಿವೃತ್ತ ಪ್ರಾಂಶುಪಾಲ ಪಿ.ಎಚ್.ನರಹಟ್ಟಿ, ಸಿ.ಎ ಶ್ರೀನಿವಾಸ ನೆಲಜೇರಿ, ವೆಂಕಟೇಶ ಓಲೇಕಾರ,

ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಹಂಪಣ್ಣ ಚಂಡೂರು, ಗೋರ್ಕಲ್ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಕಮಲಾ, ಪ್ರಾಂಶುಪಾಲ ಶಂಕ್ರಪ್ಪ ಅಂಗಡಿ, ಆಂಜನೇಯ ನಾಯಕ ನಸಲಾಪುರ, ಉಪಸ್ಥಿತರಿದ್ದರು.

ಉಪನ್ಯಾಸಕರಾದ ಅಬ್ದುಲ್ ರಹೀಮ್ ಸ್ವಾಗತಿಸಿದರು. ರವಿಚಂದ್ರ ನಿರೂಪಿಸಿದರು. ನಾಗರಾಜ ವಂದಿಸಿದರು.

## ಅಬಕಾರಿ ಇಲಾಖೆ ಭ್ರಷ್ಟಾಚಾರ: ತಿಮ್ಮಾಪುರ ರಾಜೀನಾಮೆಗೆ ವಿಪಕ್ಷ ಆಗ್ರಹ

**ಬೆಂಗಳೂರು, ಫೆ. 3–** ಅಬಕಾರಿ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರ ವಿಧಾನಸಭೆಯಲ್ಲಿಂದು ಪ್ರತಿಧ್ವನಿಸಿ, ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿ, ಆರೋಪ-ಪ್ರತ್ಯಾರೋಪಗಳು ನಡೆದು ಪ್ರತಿಪಕ್ಷಗಳು ಅಬಕಾರಿ ಸಚಿವರು ರಾಜೀನಾಮೆ ನೀಡಬೇಕು ಎಂಬ ಆಗ್ರಹವನ್ನು ಮಾಡಿದವು.

ಅಬಕಾರಿ ಇಲಾಖೆಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿದ್ದು, ಈ ಭ್ರಷ್ಟಾಚಾರದಲ್ಲಿ ಅಬಕಾರಿ ಸಚಿವರೆ ಭಾಗಿಯಾಗಿದ್ದಾರೆ. ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಪ್ರತಿ ಪಕ್ಷಗಳಾದ ಬಿಜೆಪಿ-ಜೆಡಿಎಸ್ ಒಕ್ಕೊರಲಿನಿಂದ ಆಗ್ರಹಿಸಿದವು.

ಇಂದು ಸದನ ಆರಂಭವಾಗುತ್ತಿದ್ದಂತೆಯೇ ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರು, ಅಬಕಾರಿ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಸುದೀರ್ಘವಾಗಿ ಮಾತನಾಡಿ, ಅಬಕಾರಿ ಇಲಾಖೆಯಲ್ಲಿ ಯಾವ ರೀತಿಯಲ್ಲಿ ಭ್ರಷ್ಟಾಚಾರ ನಡೆದಿದೆ. ಅಧಿಕಾರಿಗಳು, ಸಚಿವರು ಕೂಡಿ ನಡೆಸಿರುವ ಭ್ರಷ್ಟಾಚಾರವನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.

ವಿಪಕ್ಷ ನಾಯಕ ಆರ್. ಅಶೋಕ್, ಅಬಕಾರಿ ಇಲಾಖೆಯ ಭ್ರಷ್ಟಾಚಾರದ ಬಗ್ಗೆ ದಾಖಲೆಗಳನ್ನು ಪ್ರದರ್ಶಿಸಿ, ಲಂಚಕ್ಕೆ ಬೇಡಿಕೆ ಇಟ್ಟಿರುವ ಅಧಿಕಾರಿಗಳ ಆಡಿಯೋವನ್ನು ಸದನದ ಮುಂದಿಟ್ಟು, ಅಬಕಾರಿ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರಕ್ಕೆ ಸಾಕ್ಷಿ ಕೊಟ್ಟಿದ್ದೇನೆ. ಇದಕ್ಕಿಂತ ಸಾಕ್ಷಿ ಬೇಕಿಲ್ಲ. ಕೂಡಲೇ ಅಬಕಾರಿ ಸಚಿವರು ರಾಜೀನಾಮೆ ನೀಡಲಿ ಎಂದು ಆಗ್ರಹಿಸಿದರು.

ಪ್ರತಿಪಕ್ಷ ನಾಯಕ ಅಶೋಕ್, ಅಬಕಾರಿ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿರುವ ಸಂದರ್ಭದಲ್ಲಿ ಆಡಳಿತ ಪಕ್ಷದ ಸದಸ್ಯರಾದ ಎ. ಎಸ್. ಪೊನ್ನಣ್ಣ, ಅಶೋಕ್ ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿ ಪ್ರತಿಪಕ್ಷ ನಾಯಕರು ಏನು ಹೇಳುತ್ತಿದ್ದಾರೋ ನಮಗೆ ಅರ್ಥವಾಗುತ್ತಿಲ್ಲ ಎಂದಾಗ,



ವಿಪಕ್ಷ ಸದಸ್ಯರು ಒಮ್ಮೆಲೆ ಎದ್ದು ನಿಂತು ನಿಮಗೆ ಅರ್ಥವಾಗಲ್ಲ ಬಿಡಿ ಭ್ರಷ್ಟಾಚಾರ ನಡೆದಿದೆ.ಮೊದಲು ಅಬಕಾರಿ ಸಚಿವರು ರಾಜೀನಾಮೆ ನೀಡಲಿ ಎಂದು ಒತ್ತಾಯಿಸಿದರು.

ಅಶೋಕ್ ಅವರು, ಲಂಚ ಪಡೆಯುವಾಗ ಲೋಕಾಯುಕ್ತ ಬಲೆಗೆ ಸಿಕ್ಕಿ ಬಿದ್ದಿರುವ ಅಬಕಾರಿ ಉಪಆಯುಕ್ತ ನಾಗರಾಜಪ್ಪ ಅವರ ಆಡಿಯೋ ಸಂಭಾಷಣೆಯನ್ನು ಸದನದಲ್ಲಿ ಪ್ರದರ್ಶಿಸಿ ಅದನ್ನು ಓದಿ ಹೇಳಿ, ಸಚಿವರ ಹೆಸರನ್ನು ನಾಗರಾಜಪ್ಪ ಉಲ್ಲೇಖಿಸಿದ್ದಾರೆ. ಅವರಿಗೂ ಹಣ ಕೊಡಬೇಕು ಎಂದೆಲ್ಲಾ ಹೇಳಿದ್ದಾರೆ. ಇದನ್ನೆಲ್ಲಾ ನೋಡಿದರೆ ಅಬಕಾರಿ ಸಚಿವರು ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವುದು ಸ್ಪಷ್ಟ ಎಂದರು.

ಮಂಡ್ಯದಲ್ಲಿ ಅಬಕಾರಿ ಡಿಸಿಯ ಆಡಿಯೋವೊಂದಲ್ಲಿರುವ ಅವರ ಮಾತುಗಳನ್ನು ಓದಿದ ಆರ್. ಅಶೋಕ್ ಅವರು, ಈ ಅಧಿಕಾರಿ ಜಾತಿ ಎಲ್ಲವನ್ನು ಪ್ರಸ್ತಾಪಿಸಿದ್ದಾರೆ. ಅಧಿಕಾರಿಗಳು ಜಾತಿ ಮಾಡಲು ಹೊರಟಿದ್ದಾರೆ. ಸನ್ನದುದಾರರೊಬ್ಬರಿಗೆ ಕುರುಬ ಮುಖಂಡರ ಗ್ಯಾಂಗ್‌ನ್ನುಕರೆದುಕೊಂಡು ಹೋಗಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡು ಕೆಲಸ ಆಗುತ್ತೆ. ಜತೆಗೆ ಮುಖ್ಯಮಂತ್ರಿಗಳ ಪುತ್ರ

## ನಾಳೆ ಫೆ.5ರಿಂದ ಮೂರು ದಿನಗಳ ರಾಯಚೂರು ಜಿಲ್ಲಾ ಉತ್ಸವಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಂದ ಚಾಲನೆ

ಧೈರ್ಯದ ದಾರಿ

**ರಾಯಚೂರು ಫೆ.3–** ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಫೆ.05, 06, ಹಾಗೂ 07ರಂದು ಮೂರು ದಿನಗಳ ಕಾಲ ನಡೆಯುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಕಾರ್ಯಕ್ರಮಕ್ಕೆ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಫೆ.5ರ ಸಂಜೆ 6 ಗಂಟೆಗೆ ಚಾಲನೆ ಸಿಗಲಿದೆ.

ಕರ್ನಾಟಕ ಸರ್ಕಾರದ ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರು ಉದ್ಘಾಟನೆ ನೆರವೇರಿಸುವರು.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ ಎಸ್.ತಂಗಡಗಿ, ಕೃಷಿ ಸಚಿವರಾದ ಎನ್.ಚೆಲುವರಾಯಸ್ವಾಮಿ ಅವರು ಘನ ಉಪಸ್ಥಿತಿ ವಹಿಸುವರು.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎಂ.ರೇವಣ್ಣ, ರಾಜ್ಯ ಗ್ಯಾರಂಟಿ ಯೋಜನೆಗಳ



ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಆರ್.ಮೆಹರೋಜ್ ಖಾನ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್ ಅವರು ಉಪಸ್ಥಿತರಿರುವರು.

ವಿಶೇಷ ಆಹ್ವಾನಿತರಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ.ಶಾಲಿನಿ ರಜನೀಶ್, ಇಂಧನ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಕೆ.ಪಿ.ಸಿ.ಎಲ್ ವ್ಯವಸ್ಥಾಪಕ ನಿರ್ದೇಶಕರಾದ ಗೌರವ ಗುಪ್ತಾ, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕೃಷಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಡಾ.ಸೆಲ್ವಕುಮಾರ ಎಸ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸರ್ಕಾರದ ಕಾರ್ಯದರ್ಶಿ ಜೆ.ಮಂಜುನಾಥ, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಕೆ.ಎಂ.ಗಾಯಿತ್ರಿ, ಹಟ್ಟಿ ಚಿನ್ನದ ಗಣಿ ನಿಯಮಿತದ ವ್ಯವಸ್ಥಾಪಕರಾದ ಶಿಲ್ಪಾ ಆರ್., ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಂ.ಹನುಮಂತಪ್ಪ ಅವರು ಉಪಸ್ಥಿತರಿರುವರು.

ಗೌರವಾನ್ವಿತ ಆಹ್ವಾನಿತರಾಗಿ ನವೋದಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಎಸ್.ಆರ್.ರೆಡ್ಡಿ, ಆರ್.ಸಿ.ಎಮ್.ಎ ರಾಸಾಯನಿಕ ತಯಾರಿಕರ ಸಂಘದ ಅಧ್ಯಕ್ಷರಾದ ಡಾ.ರಮೇಶ, ಶಿಲ್ಪಾ ಮೆಡಿಕೇರ್ ಲಿಮಿಟೆಡ್ ಅಧ್ಯಕ್ಷರಾದ ವಿಷ್ಣುಕಾಂತ ಭುತಡ, ರೈಸ್ ಮಿಲ್ಲರನ್ಸ್ ಅಸೋಸಿಯೇಷನ್ ಅಧ್ಯಕ್ಷರಾದ ಸಾವಿತ್ರಿ ಪುರುಷೋತ್ತಮ ಸೇರಿದಂತೆ ಜಿಲ್ಲೆಯ ಎಲ್ಲಾ ಚುನಾಯಿತ ಪ್ರತಿನಿಧಿಗಳು, ಕೈಗಾರಿಕೋದ್ಯಮಿಗಳು, ಹೋಟಲ್ ಉದ್ಯುಮಿಗಳು, ವ್ಯಾಪಾರಸ್ಥರು, ಕೃಷಿ ಪರಿಕರ ಮಾರಾಟಗಾರರು, ಸಂಘ ಸಂಸ್ಥೆಯ ಪದಾಧಿಕಾರಿಗಳು, ವಿವಿಧ ಇಲಾಖೆಯ ಮತ್ತು ರಾಯಚೂರು ಜಿಲ್ಲೆಯ ಸಮಸ್ತ ನಾಗರೀಕರು ಉಪಸ್ಥಿತರಿರುವರು.

ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

## ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ: ಬಣವೆ ಭಸ್ಮ

ಧೈರ್ಯದ ದಾರಿ


**ಮಸ್ಕಿ,ಫೆ.3–** ತಾಲೂಕಿನ ಕಣ್ಣೂರು ಗ್ರಾಮದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ತಗುಲಿ 1ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ ಹುಲ್ಲಿನ ಬಣವೆ ಸುಟ್ಟು ಭಸ್ಮವಾಗಿದೆ. ಮಸ್ಕಿ ತಾಲೂಕಿನ ಕೋಳಬಾಳ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಣ್ಣೂರು ಗ್ರಾಮದಲ್ಲಿ ನಡೆದಿದೆ.

ಗಂಗಮ್ಮ ಗಂಡ ಶೇಖರಗೌಡ ಮಾಲಿ ಪಾಟೀಲ್ ಎನ್ನುವವರಿಗೆ ಸೇರಿದ ಬಣವೆ ಬೆಂಕಿಗಾಹುತಿಯಾಗಿದೆ. ಬೇಸಿಗೆಯಲ್ಲಿ ದನ ಕರುಗಳಿಗೆ ಮೇವಿನ ಅಭಾವ ಸೃಷ್ಟಿಯಾಗಬಾರದು ಎಂದು ಗಂಗಮ್ಮರವರು 1 ಲಕ್ಷಕ್ಕೂ ಹೆಚ್ಚಿನ ಮೌಲ್ಯದ ಹುಲ್ಲಿನ ಬಣವೆಯನ್ನು ಸಂಗ್ರಹಿಸಿಟ್ಟಿದ್ದರು.

ಬೆಂಕಿ ಕಾಣಿಸಿಕೊಂಡ ತಕ್ಷಣವೇ ಅಗ್ನಿ ಶಾಮಕದಳಕ್ಕೆ ಕರೆ ಮಾಡಿದ ಸ್ವಲ್ಪ ಹೊತ್ತಿನಲ್ಲೇ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಗಳದ ನರಸಪ್ಪ, ಗಂಗಪ್ಪ, ಮಂಜನಗೌಡ, ವಾಚಪ್ಪ, ಮೌನೇಶ್, ಅಮರೇಶಪ್ಪಗೌಡ, ವೆಂಕಟೇಶ್ ಸೇರಿದಂತೆ ಗ್ರಾಮಸ್ಥರು ಬೆಂಕಿ ನಂದಿಸಿದರು.ಬೆಂಕಿ ಆರಿಸಲು ಇನ್ನು ಸ್ವಲ್ಪ ತಡವಾಗಿದ್ದರು ಪಕ್ಕದಲ್ಲೆ ಇದ್ದ ಮನೆಗೆ ಸೇರಿದಂತೆ ಸುಮಾರು ದನ ಕರುಗಳು ಬೆಂಕಿಗೆ ಆಹುತಿಯಾಗುತ್ತಿದ್ದವು.

ಸಂತ್ರಸ್ತ ಕುಟುಂಬ ಬಡತನದ ಕುಟುಂಬವಾಗಿದ್ದು, ನಷ್ಟ ಪರಿಹಾರವಾಗಿ 1 ಲಕ್ಷ ರೂಪಾಯಿ ಪರಿಹಾರ ನೀಡಬೇಕು ಎಂದು ಗ್ರಾಮ ಪಂಚಾಯತ್ ಸದಸ್ಯರು ಸರಕಾರಕ್ಕೆ ಆಗ್ರಹಿಸಿದ್ದಾರೆ.

## ಕೇಂದ್ರ ಕಾರಾಗೃಹದಲ್ಲಿ 3 ಮೊಬೈಲ್, 3 ಸಿಮ್ ಕಾರ್ಡ್, 2 ಏರ್ ಬಡ್ಸ್ ಪತ್ತೆ




**ಕಲಬುರಗಿ,ಫೆ.3–**ನಗರ ಹೊರವಲಯದ ಕೇಂದ್ರ ಕಾರಾಗೃಹದಲ್ಲಿ ತಪಾಸಣೆಯ ವೇಳೆ 3 ಮೊಬೈಲ್, 3 ಸಿಮ್ ಕಾರ್ಡ್ ಮತ್ತು 2 ಏರ್ ಬಡ್ಸ್ ಪತ್ತೆಯಾಗಿವೆ. ಕಾರಾಗೃಹದ ಸಿಬ್ಬಂದಿ ಕಾರಾಗೃಹದ ಬ್ಯಾರಕ್ ಸಂಖ್ಯೆ 11 ರಿಂದ 13 ರಲ್ಲಿ ಅನಿರೀಕ್ಷಿತ ತಪಾಸಣೆ ನಡೆಸುತ್ತಿದ್ದ ವೇಳೆ ಬ್ಯಾರಕ್ ಸಂಖ್ಯೆ 12ರ ಶೌಚಾಲಯದ ಗೋಡೆಯ ಟೈಲ್ಸ್ ಒಳಗೆ ಈ ನಿಷೇಧಿತ ವಸ್ತುಗಳು ಪತ್ತೆಯಾಗಿದ್ದು, ಈ ಸಂಬಂಧ ಕಾರಾಗೃಹದ ಅಧೀಕ್ಷಕ ರಾಕೇಶ ಕಾಂಬಳೆ ಅವರು ಫರಹತಾಬಾದ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ತನಿಖೆ ನಡೆದಿದೆ.

## ಜಿಲ್ಲಾ ಉತ್ಸವದ ಜ್ಯೋತಿ ರಥ ಯಾತ್ರೆಗೆ ಅದ್ದೂರಿ ಸ್ವಾಗತ

ಧೈರ್ಯದ ದಾರಿ

**ಲಿಂಗಸುಗೂರು,ಫೆ.3–** ರಾಯಚೂರು ಜಿಲ್ಲಾ ಉತ್ಸವದ ಅಂಗವಾಗಿ ಜಿಲ್ಲಾಡಳಿತ ರೂಪಿಸಿರುವ ಜ್ಯೋತಿ ರಥಯಾತ್ರೆಯನ್ನು ಲಿಂಗಸುಗೂರು ಪಟ್ಟಣದ ಬಸವಸಾಗರ ಕ್ರಾಸ್ ಹತ್ತಿರ ತಾಲೂಕು ಆಡಳಿತದಿಂದ ಅದ್ದೂರಿಯಾಗಿ ಸ್ವಾಗತ ಮಾಡಿಕೊಳ್ಳಲಾಯಿತು.

ರಾಯಚೂರು ದಿಂದ ಪ್ರಾರಂಭವಾದ ಜಿಲ್ಲಾ ಉತ್ಸವ ಜ್ಯೋತಿ ಯಾತ್ರೆಯು ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಸಾಗಿದ ಉತ್ಸವ ಜ್ಯೋತಿ ಪಟ್ಟಣ ಪ್ರವೇಶಿಸುತ್ತಿದ್ದಂತೆ ಜನಸಾಗರವೇ ಹರಿದುಬಂದಿತು. ಹೂವುಗಳು ಹಾಗೂ ತಳಿರು ತೋರಣಗಳಿಂದ ಶೃಂಗರಿಸಲ್ಪಟ್ಟ ರಥವು ಸಾರ್ವಜನಿಕರ ಗಮನ ಸೆಳೆಯಿತು.

ರಥಯಾತ್ರೆಯು ಪಟ್ಟಣದ ಪ್ರಮುಖ ರಸ್ತೆಗಳ ಎರಡೂ ಬದಿಗಳಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳು, ಯುವಕರು, ಮಹಿಳಾ ಸಂಘಟನೆಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಕಾರ್ಯಕರ್ತರು ಜ್ಯೋತಿ ಯಾತ್ರೆಗೆ ಪುಷ್ಪವೃಷ್ಟಿ ಮಾಡಿ ಸ್ವಾಗತಿಸಿದರು. ಡೊಳ್ಳು ಕುಣಿತ, ವೀರಗಾಸೆ, ಜನಪದ ಕಲಾವಿದರ ನೃತ್ಯಗಳು ಯಾತ್ರೆಗೆ ವಿಶೇಷ ಮೆರುಗು ನೀಡಿದವು.



ಜಿಲ್ಲಾಡಳಿತ, ಜಿಲ್ಲಾಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಉತ್ಸವ ಸಮಿತಿಯ ಆಶ್ರಯದಲ್ಲಿ ನಡೆಯುತ್ತಿರುವ ಉತ್ಸವ ಜ್ಯೋತಿಯ ಸ್ವಾಗತಿಸಿ ಮಾತನಾಡಿದ ತಹಶೀಲ್ದಾರ್ ಕೆ.ಸತ್ಯಮ್ಮ ಜಿಲ್ಲೆಯ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಜನಪದ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ಜಿಲ್ಲಾ ಉತ್ಸವದ ಮುಖ್ಯ ಉದ್ದೇಶ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಭಾರಿ ತಹಶೀಲ್ದಾರ್ ಗುರುರಾಜ ಸೋಳಂಕಿ, ಪುರಸಭೆ ಮುಖ್ಯಾಧಿಕಾರಿ ನಟರಾಜ, ಕ್ಷೇತ್ರ ಶಿಕ್ಷಣಾಧಿಕಾರಿ ಸುಜಾತ ಹೂನುರ, ಸಿಡಿಪಿಓ ನಾಗರತ್ನ, ಆರೋಗ್ಯಾಧಿಕಾರಿ ಅಮರೇಶ ಪಾಟೀಲ್, ಅಬಕಾರಿ ಅಧಿಕಾರಿ ಲಕ್ಷ್ಮೀದೇವಿ, ಸಮಾಜ ಕಲ್ಯಾಣ ಅಧಿಕಾರಿ ರವೀಂದ್ರ ಉಪ್ಪಾರ್ ಸೇರಿದಂತೆ ಸಾಹಿತಗಳು, ಚಿಂತಕರು, ವಿವಿಧ ಸಂಘಟನೆಗಳ ಮುಖಂಡರು ಹಾಗೂ ಸಾರ್ವಜನಿಕರು ಇದ್ದರು.

ಮೊದಲನೇ ಪುಟದಿಂದ

# ಅಬಕಾರಿ ಇಲಾಖೆ ಭ್ರಷ್ಟಾಚಾರ: ತಿಮ್ಮಾಪುರ ರಾಜೀನಾಮೆಗೆ ವಿಪಕ್ಷ ಆಗ್ರಹ

ಯತೀಂದ್ರ ಅವರನ್ನೂ ಭೇಟಿ ಮಾಡು, ಅಲ್ಲಿಂದ ಫೋನ್ ಮಾಡಿಸು ಎಂದು ಸಲಹೆ ಮಾಡಿದ್ದಾರೆ. ಜತೆಗೆ ಒಕ್ಕಲಿಗ ಮುಖಂಡರನ್ನು ಕರೆದುಕೊಂಡು ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರನ್ನು ಭೇಟಿ ಮಾಡು ಎಂದು ಸಲಹೆ ಕೊಟ್ಟಿದ್ದಾರೆ. ಅಧಿಕಾರಿಗಳು ಹೀಗೆ ಜಾತಿ ಮಾಡಿದರೆ ಹೇಗೆ, ಆ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಿ ಎಂದರು

ಈ ಅಧಿಕಾರಿಯ ಮಾತುಗಳನ್ನು ಸನ್ನದುದಾರ ರೆಕಾರ್ಡ್ ಮಾಡಿದ ನಂತರ ವರಸೆ ಬದಲಾಯಿಸಿದ ಮಂಡ್ಯ ಜಿಲ್ಲಾ ಅಬಕಾರಿ ಜಿಲ್ಲಾಧಿಕಾರಿ ನಾಗಶಯನ, ನನ್ನ ಬಗ್ಗೆ ಮಾಡಿರುವ ಆಡಿಯೋ ರೆಕಾರ್ಡ್ ವಾಪಸ್ ಕೊಡು. ನಿನ್ನ ಕೆಲಸ ಮಾಡಿಕೊಡುತ್ತೇನೆ ಎಂದು ಮಹಾತ್ಮಗಾಂಧೀಜಿ ಅವರ ಮೇಲೆ ಆಣೆ ಮಾಡಿದ್ದಾರೆ. ಇಂತಹ ಅಧಿಕಾರಿಯನ್ನು ಬಿಟ್ಟಿದ್ದಿರಲ್ಲಾ ಕ್ರಮ ಕೈಗೊಳ್ಳಿ ಎಂದು ಒತ್ತಾಯಿಸಿದರು

ಈ ಹಂತದಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ಬಿಜೆಪಿಯ ಸುನಿಲ್‌ಕುಮಾರ್, ಈ ಸರ್ಕಾರಕ್ಕೆ ಮಾನ ಮರ್ಯಾದೆ ಇದೆಯೇ ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆದಿರುವುದು ಸ್ಪಷ್ಟವಾಗಿರುವಾಗ ಈ ಬಗ್ಗೆ ಚರ್ಚೆ ಬೇಕಾ. ಮೊದಲು ಸಚಿವರ ರಾಜೀನಾಮೆ ಪಡೆಯಿರಿ. ಮರ್ಯಾದೆ ಇದ್ದರೆ ಸಚಿವರು ರಾಜೀನಾಮೆ ಕೊಡಲಿ ಎಂದು ಏರು ಧ್ವನಿಯಲ್ಲಿ ಹೇಳಿದ್ದು, ಆಡಳಿತ ಪಕ್ಷದ ಸದಸ್ಯರ ಆಕ್ಷೇಪಕ್ಕೆ ಕಾರಣವಾಯಿತು.

ಈ ಹಂತದಲ್ಲಿ ಆಡಳಿತ ಮತ್ತು ವಿಪಕ್ಷ ಸದಸ್ಯರು ಪರಸ್ಪರ ಮಾತಿನ ಚಕಮಕಿಗೆ ಇಳಿದು ಗದ್ದಲದ ವಾತಾವರಣ ರೂಪುಗೊಂಡಿತು. ಇದಾದ ನಂತರ ತಮ್ಮ ಮಾತು ಮುಂದುವರೆಸಿದ ಆರ್. ಅಶೋಕ್, ಮದ್ಯ ಮಾರಾಟ ಸಂಘದ ಅಧ್ಯಕ್ಷ ಗುರುಸ್ವಾಮಿ ಅವರು ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಯಾವ ರೀತಿ ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದನ್ನು ಎಳೆ ಎಳೆಯಾಗಿ ತಿಳಿಸಿದ್ದಾರೆ. ಜತೆಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಊರಿನವರೇ ಅವರಿಗೆ ಆಪ್ತ ಸ್ನೇಹಿತರು, ಮುಖ್ಯಮಂತ್ರಿಗಳ ಸ್ನೇಹಿತರೇ ಅಬಕಾರಿ ಇಲಾಖೆಯ ಭ್ರಷ್ಟಾಚಾರ, ಪ್ರತಿ ವೈನ್‌ಸ್ಟೋರ್, ಬಾರ್‌ಗಳಿಂದ ಎಷ್ಟೆಷ್ಟು ಹಣ ತಿಂಗಳ ಮಾಮೂಲಿಯಾಗಿ ನಿಗದಿಯಾಗಿದೆ ಎಂಬುದನ್ನೆಲ್ಲಾ ಹೇಳಿದ್ದಾರೆ. ಇಷ್ಟೆಲ್ಲಾ ಆದರೂ ಮುಖ್ಯಮಂತ್ರಿಗಳು ಸುಮ್ಮನಿಸಿದ್ದಾರೆ ಎಂದು ಹೇಳಿದಾಗ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹೌದ ಗುರುಸ್ವಾಮಿ ನಮ್ಮ ವರುಣ ಕ್ಷೇತ್ರದವನೇ ನಮ್ಮ ಪಕ್ಕದ ಪಂಚಾಯ್ತಿಯವನು. ಈ ಹಿಂದೆ ನಾನು ತಾಲ್ಲೂಕು ಮಂಡಳಿ ಸದಸ್ಯನಾಗಿದ್ದಾಗ ಆತ ಅಧ್ಯಕ್ಷನಾಗಿದ್ದ ಎಂದು ಹೇಳಿದರು.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ನಿಮ್ಮ ಸ್ನೇಹಿತರೆ ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆದಿರುವುದನ್ನು ಹೇಳಿದ್ದಾರೆ. ನಿಮ್ಮನ್ನು ಭೇಟಿ ಮಾಡಿ ತಿಳಿಸಿದ್ದೆ ಆದರೆ ಕ್ರಮ ಆಗಲಿಲ್ಲ ಎಂದೆಲ್ಲಾ ಪತ್ರಿಕೆಗಳಿಗೆ ನೀಡಿರುವ ಸಂದರ್ಶನದಲ್ಲ ಹೇಳಿದ್ದಾರೆ. ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಮಿತಿಮಿರಿದೆ. ಅಬಕಾರಿ ಸಚಿವರು ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಾರೆ ಅವರ ರಾಜೀನಾಮೆ ಪಡೆಯಿರಿ ಎಂದು ಒತ್ತಾಯಿಸಿದರು.

ವಿಪಕ್ಷಗಳ ಒತ್ತಡಕ್ಕೆ ಮಣಿದ ಸ್ಪೀಕರ್-ವಿಧಾನಸಭೆಯಲ್ಲಿಂದು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿಜಿ ರಾಮ್‌ಜಿ ಕಾಯ್ದೆ ಬಗ್ಗೆ ಮೊದಲು ಚರ್ಚೆ ಆಗಬೇಕಿತ್ತಾದರೂ ಪ್ರತಿ ಪಕ್ಷಗಳ ಒತ್ತಡಕ್ಕೆ ಮಣಿದು ವಿಧಾನಸಭಾಧ್ಯಕ್ಷರು ಮೊದಲು ಅಬಕಾರಿ ಇಲಾಖೆಯ ಭ್ರಷ್ಟಾಚಾರದ ಚರ್ಚೆಗೆ ಅನುವು ಮಾಡಿಕೊಟ್ಟರು.

ವಿಧಾನಸಭೆಯ ಕಾರ್ಯಸೂಚಿಯಲ್ಲಿ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಬಿಜಿರಾಮ್‌ಜಿ ಕಾಯ್ದೆಯನ್ನು ವಿರೋಧಿಸುವ ಹಾಗೂ ಮನರೇಗಾ ಪುನರ್ ಸ್ಥಾಪಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಮಂಡಿಸಬೇಕಿತ್ತು. ಆದರೆ ಪ್ರತಿಪಕ್ಷಗಳು ಮೊದಲು ಅಬಕಾರಿ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಚರ್ಚೆಗೆ ಅವಕಾಶ ಕೊಡಿ ನಂತರ ವಿಬಿಜಿ ರಾಮ್‌ಜಿ ಕಾಯ್ದೆ ವಿಚಾರವನ್ನು ಕೈಗೆತ್ತಿಕೊಳ್ಳಿ ಎಂದು ಪಟ್ಟುಹಿಡಿದಿದ್ದರಿಂದ ಕಲಾಪ ಆರಂಭ ಸುಮಾರು ಒಂದೂವರೆ ಗಂಟೆ ತಡವಾಯಿತು.ಇಂದು ಸದನ 10 ಗಂಟೆಗೆ ನಿಗದಿಯಾಗಿತ್ತಾದರೂ ಪ್ರತಿಪಕ್ಷಗಳ ಪಟ್ಟಿನಿಂದ ಸದನ ಆರಂಭವಾದಾಗ ಮಧ್ಯಾಹ್ನ 11.45 ನಿಮಿಷ ಆಗಿತ್ತು. ಪ್ರತಿಪಕ್ಷಗಳ ಆಗ್ರಹಕ್ಕೆ ಮಣಿದು ಅಬಕಾರಿ ಇಲಾಖೆಯ ಚರ್ಚೆಯ ನಂತರ ವಿಬಿಜಿ ರಾಮ್‌ಜಿ ಕಾಯ್ದೆ ಹಾಗೂ ಮನರೇಗಾ ಯೋಜನೆ ಪುನರ್ ಸ್ಥಾಪನೆ ನಿರ್ಣಯ ಹಾಗೂ ಮಂಡನೆ ಬಗ್ಗೆ ಚರ್ಚೆ ನಡೆಯಲಿದೆ.

---

ಯುವ ಹಫೀಜ್ ಇ ಕುರಾನ್, ಹಫೀಜ್ ಸೈಯದ್ ಮೊಹಮ್ಮದ್ ಮೊಹಮ್ಮದಲ್ ರೆಹಾನ್ ಹುಸೇನಿ ಮತ್ವಾಲೆ ಸಮರ್ಪಣೆ, ಶಿಸ್ತು ಮತ್ತು ದೈವಿಕ ಆಶೀರ್ವಾದದ ಹೊಳೆಯುವ ಉದಾಹರಣೆ. ಅಂತಹ ಕೋಮಲತೆಯಿಂದ ಪವಿತ್ರ ಕುರಾನ್ ಅನ್ನು ಕಂಠಪಾಠ ಮಾಡುವುದು ತೀಕ್ಷ್ಣವಾದ ಬುದ್ಧಿಶಕ್ತಿಯನ್ನು ಮಾತ್ರವಲ್ಲದೆ ಆಳವಾದ ನಂಬಿಕೆ ಮತ್ತು ಪರಿಶ್ರಮವನ್ನೂ ಪ್ರತಿಬಿಂಬಿಸುತ್ತದೆ.


ಈ ಉದಾತ್ತ ಸಾಧನೆಯು ಹಜರತ್ ಮತ್ವಾಲೆ ಹುಸೇನಿ ಸಾಹೇಬ್ ಗುರು ಕುಟುಂಬ ಮತ್ತು ಇಡೀ ಸಮುದಾಯಕ್ಕೆ ಅಪಾರ ಹೆಮ್ಮೆಯ ಮೂಲವಾಗಿದೆ. ಅಲ್ಲಾಹನು (SWT) ಅವರನ್ನು ಕುರಾನ್ ಹಾದಿಯಲ್ಲಿ ದೃಢವಾಗಿರಿಸಲಿ, ಅವರಿಗೆ ಬುದ್ಧಿವಂತಿಕೆ, ನೀತಿವಂತ ಚಾರಿತ್ರ್ಯವನ್ನು ನೀಡಲಿ ಮತ್ತು ಕುರಾನ್ ಅನ್ನು ಅವರ ಹೃದಯದಲ್ಲಿ ಬೆಳಕಾಗಿ ಮತ್ತು ಅವರ ಜೀವನದುದ್ದಕ್ಕೂ ಮಾರ್ಗದರ್ಶಿಯಾಗಿ ಮಾಡಲಿ. ಮತ್ವಾಲೆ ಹುಸೇನಿ ಸಾಹೇಬ್ ಗುರುಗಳ ಕುಟುಂಬ ಅಭಿನಂದನೆಗಳನ್ನು ತಿಳಿಸಿದ್ದಾರೆ.



---

# ಟಿಪ್ಪರ್ ಡಿಕ್ಕಿಗೆ ನಜ್ಜುಗುಜ್ಜಾದ ಯುವಕ: ಸ್ಥಳದಲ್ಲೇ ಸಾವು





ಧೈರ್ಯದ ದಾರಿ

**ಕವಿತಾಳ,ಫೆ.3–** ಕುರುಕುಂದ ಯಲ್ಲಮ್ಮ ಜಾತ್ರೆ ಮುಗಿಸಿಕೊಂಡು ಪತ್ನಿಯ ತವರೂರಿಗೆ ಬೈಕ್‌ನಲ್ಲಿ ತೆರಳುತ್ತಿದ್ದಾಗ, ಟಿಪ್ಪರ್ ಡಿಕ್ಕಿ ಹೊಡೆದು ಯುವಕನೋರ್ವನ ದೇಹ ಸಂಪೂರ್ಣ ನಜ್ಜುಗುಜ್ಜಾಗಿ ಸ್ಥಳದಲ್ಲೇ ಮೃತಪಟ್ಟ ದಾರುಣ ಘಟನೆ ಪಟ್ಟಣದ ಹೊರವಲಯದ ಲಿಂಗಸ್ಗೂರು ರಸ್ತೆಯಲ್ಲಿರುವ ಇಟ್ಟಿಗೆ ಭಟ್ಟಿ ಹತ್ತಿರ ನಿನ್ನೆ ರಾತ್ರಿ (ಮಧ್ಯರಾತ್ರಿ) 12:20 ರ ಸುಮಾರಿಗೆ ನಡೆದಿದೆ.

ದೇವದುರ್ಗ ತಾಲೂಕಿನ ಚಡಕಲ್ ಗುಡ್ಡ (ಚಡಕನಗುಡ್ಡ) ಗ್ರಾಮದ ನಿವಾಸಿ ಬಸವರಾಜ್ (32) ಮೃತಪಟ್ಟ ದುರ್ದೈವಿ.

ಘಟನೆಯ ವಿವರ:

ಬಸವರಾಜ್ ಅವರು ಕುರುಕುಂದ ಯಲ್ಲಮ್ಮ ಜಾತ್ರೆಯನ್ನು ಮುಗಿಸಿಕೊಂಡು, ತಮ್ಮ ಪತ್ನಿಯ ತವರೂರಾದ ಪಾಮನಕಲ್ಲೂರಿಗೆ (Pamanakallur) ಹೋಗುತ್ತಿದ್ದರು. ಇವರೊಂದಿಗೆ ಇನ್ನೊಂದು ಬೈಕ್‌ನಲ್ಲಿ ಇವರ ಸ್ನೇಹಿತ ಆಮಿರಪಾಷ ಮತ್ತು ಮೃತನ ಮಾವ ಬಸವರಾಜ್ ಅವರು ಒಟ್ಟಿಗೆ ತೆರಳುತ್ತಿದ್ದರು. ಮೃತ ಬಸವರಾಜ್ ಅವರು ಏಂ 04 ಎಒ 4394 ನಂಬರಿನ ಬೈಕ್‌ನಲ್ಲಿ ಒಬ್ಬರೇ ಹಿಂಬಾಲಿಸುತ್ತಿದ್ದರು. ರಾತ್ರಿ ಸುಮಾರು 12:20 ರ ಹೊತ್ತಿಗೆ ಇವರು ಕವಿತಾಳದ ಇಟ್ಟಿಗೆ ಭಟ್ಟಿ ಹತ್ತಿರ ತಲುಪಿದ್ದಾರೆ. ಸ್ನೇಹಿತ ಆಮಿರಪಾಷ ಮತ್ತು ಮಾವ ಬಸವರಾಜ್ ಅವರಿದ್ದ ಬೈಕ್ ಮುಂದೆ ಹೋಗಿದೆ. ಈ ವೇಳೆ ಯಕ್ಲಾಸ್‌ಪುರ ಕಡೆಯಿಂದ ಕವಿತಾಳದ ಕಡೆಗೆ ಬರುತ್ತಿದ್ದ ಏಂ 36 ಅ 7746 ನಂಬರಿನ ಟಿಪ್ಪರ್, ಹಿಂದಿನಿಂದ ಬರುತ್ತಿದ್ದ ಬಸವರಾಜ್ ಅವರ ಬೈಕ್‌ಗೆ ಮುಖಾಮುಖಿ ಡಿಕ್ಕಿ ಹೊಡೆದಿದೆ.

**ಸ್ನೇಹಿತರ ಕಣ್ಣೆದುರೇ ಘೋರ ಕೃತ್ಯ:** ಸ್ವಲ್ಪ ದೂರದಲ್ಲೇ ಇದ್ದ ಸ್ನೇಹಿತರು ಮತ್ತು ಮಾವ ನೋಡುವಷ್ಟರಲ್ಲೇ ಟಿಪ್ಪರ್ ಬೈಕ್‌ಗೆ ಗುದ್ದಿ ಪಲ್ಟಿಯಾಗಿತ್ತು. ಅಪಘಾತದ ತೀವ್ರತೆ ಎಷ್ಟಿತ್ತೆಂದರೆ, ಬೈಕ್ ಸವಾರ ಬಸವರಾಜ್ ಅವರ ದೇಹ ಸಂಪೂರ್ಣ ನಜ್ಜುಗುಜ್ಜಾಗಿತ್ತು. ಮುಖ ಛಿದ್ರವಾಗಿದ್ದರಿಂದ ಗುರುತು ಪತ್ತೆ ಹಚ್ಚುವುದೂ ಕಷ್ಟವಾಗಿತ್ತು. ಸ್ಥಳದಲ್ಲಿದ್ದ ಸ್ನೇಹಿತರು ಬೈಕ್ ನಂಬರ್ ನೋಡಿ ಮೃತಪಟ್ಟಿದ್ದು ಬಸವರಾಜ್ ಎಂದು ಖಚಿತಪಡಿಸಿಕೊಂಡಿದ್ದಾರೆ.

**ರಾತ್ರಿಯೇ ಸ್ಥಳಕ್ಕೆ ಧಾವಿಸಿದ ಪೊಲೀಸರು:** ಅಪಘಾತದ ವಿಷಯ ತಿಳಿದ ತಕ್ಷಣ, ರಾತ್ರಿಯೇ ಕವಿತಾಳ ಠಾಣೆಯ ಪೊಲೀಸರು ಘಟನಾ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು. ಇಂದು ಮರಣೋತ್ತರ ಪರೀಕ್ಷೆ (Post-mortem) ನಡೆಸಿ, ಶವವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಈ ಕುರಿತು ಕವಿತಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಟಿಪ್ಪರ್‌ಗಳ ಹಾವಳಿಗೆ ಜನರ ಆಕ್ರೋಶ:** "ಕವಿತಾಳ ಭಾಗದಲ್ಲಿ ಇತ್ತೀಚೆಗೆ ಟಿಪ್ಪರ್‌ಗಳ ಅಲೆದಾಟ ಮಿತಿಮೀರಿದೆ. ಚಾಲಕರ ಅತೀ ವೇಗ ಮತ್ತು ನಿರ್ಲಕ್ಷ್ಯದಿಂದ ಅಮಾಯಕ ಜೀವಗಳು ಬಲಿಯಾಗುತ್ತಿವೆ. ರಸ್ತೆಯಲ್ಲಿ ಸಂಚರಿಸಲು ಜನಸಾಮಾನ್ಯರು ಭಯಪಡುವಂತಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳಬೇಕು," ಎಂದು ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

---

# ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನಕ್ಕೆ ಅರ್ಜಿ ಸಲ್ಲಿಸಲು ಫೆ.10ರವರೆಗೆ ಅವಧಿ ವಿಸ್ತರಣೆ

**ರಾಯಚೂರು ಫೆ.3–** ಅಂತಾರಾಷ್ಟ್ರೀಯ, ರಾಷ್ಟ್ರ ಮತ್ತು ರಾಜ್ಯ ಮಟ್ಟದ ತಂಡಗಳನ್ನು ಪ್ರತಿನಿಧಿಸಿ ಸರ್ಕಾರದಿಂದ ಅಂಗೀಕೃತವಾದಂತಹ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ಸಹಾಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಯ ಅವಧಿಯನ್ನು ಫೆ.10ರವರೆಗೆ ವಿಸ್ತರಣೆ ಮಾಡಲಾಗಿದೆ.

2024ನೇ ಕ್ಯಾಲೆಂಡರ್ ವರ್ಷದಲ್ಲಿ ದಿನಾಂಕ 01-01-2024 ರಿಂದ 31-12-2024ರವರೆಗೆ ಅಂತಾರಾಷ್ಟ್ರೀಯ, ರಾಷ್ಟ್ರ, ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ಸಹಾಯ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಅಂತಾರಾಷ್ಟ್ರೀಯ ರಾಷ್ಟ್ರ, ರಾಜ್ಯ ಮಟ್ಟದ ತಂಡಗಳನ್ನು ಪ್ರತಿನಿಧಿಸಿ ಸರ್ಕಾರದಿಂದ ಅಂಗೀಕೃತವಾದಂತಹ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನಕ್ಕೆ ಅರ್ಹ ಕ್ರೀಡಾಪಟುಗಳು ಅರ್ಜಿಗಳನ್ನು ಅಧಿಕೃತ ಜಾಲತಾಣ ವಿಳಾಸఃಣಣಠಿ://ಜತಘುಟಜ಼ುಣ.ಇಚಿಡಿಟಿಚಿಣಚಿಞಚಿ.ರಠತ.ಟಿ ನಲ್ಲಿ ಫೆ.10ರೊಳಗಾಗಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ರಾಯಚೂರು ಇವರನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

# ಮಹಾನಗರ ಪಾಲಿಕೆಯ ಹಣ ದುರ್ಬಳಕೆ ಅಧಿಕಾರಿಗಳ ನಿರ್ಲಕ್ಷ್ಯ : ಕಡಿವಾಣಕ್ಕೆ ಮನವಿ

ಧೈರ್ಯದ ದಾರಿ




**ರಾಯಚೂರು,ಫೆ.3–:** ಇತ್ತೀಚೆಗೆ ಎಲ್ ಬಿಎಸ್ ನಗರದ ಈಶ್ವರ ದೇವಸ್ಥಾನದ ಸುತ್ತಮುತ್ತ ಹಾಗೂ ಹಿಂಬದಿ - ಮುಂಬದಿ ಓಣಿಗಳಲ್ಲಿ ಬ್ರಿಕ್ ಟೈಲ್ಸ್ ರಸ್ತೆ ನಿರ್ಮಾಣ ಮಾಡಲಾಗಿದ್ದು, ಇದೀಗ ಯುಜಿ ಡಿ ಟೆಂಡರ್ ಕಾರ್ಯ ಗತ ವಾಗಿದ್ದು, ಯುಜಿಡಿಗೆ ಕನೆಕ್ಷನ್ ಕೊಡಲು ಇತ್ತೀಚೆಗೆ ಹಾಕಿದ್ದ ಟೈಲ್ಸ್ ರಸ್ತೆ ಮತ್ತೆ ಅಗೆದು ಪುನಃ ಕಾಮಗಾರಿ ಅಸ್ತವ್ಯಸ್ಥ ಮಾಡಲಾ ಗಿದೆ. ಅದಲ್ಲದೆ ಈಶ್ವರ ದೇವ ಸ್ಥಾನದ ಸುತ್ತಮುತ್ತಲಿನ ಮನೆ ಗಳಿಗೆ ಕುಡಿಯುವ ನೀರಿನ ನಳದ ವ್ಯವಸ್ಥೆ ಇಲ್ಲದಾಗಿದ್ದು, ಯುಜಿಡಿ ಕಾಮಗಾರಿ ಪೂರ್ತಿಯಾಗಿ ,ಅದರ ಮೇಲೆ ರಸ್ತೆ ನಿಮಾ ರ್ಣ ಮಾಡಲು ಮುಂದಾ ಗಿದ್ದಾರೆ.. ಮತ್ತೊಂದು ಟೆಂಡರ್ ಪ್ರಕ್ರಿಯೆ ಬಂದಾಗ ಮತ್ತೆ ನಿರ್ಮಾಣವಾದ ರಸ್ತೆ ಯನ್ನು ಪುನಃ ಅಗೆದು ಕುಡಿ ಯುವ ನೀರಿನ ಪೈಪ್‌ಲೈನ್ ಅಳವಡಿಸಬಹುದು ಎಂಬ ಹೊಸ ಹೊಸ ಟೆಂಡರ್‌ನ ಆಹ್ವಾನವನ್ನು ಕೆಲವರು ಕಾದು ನೋಡುತ್ತಿರುವುದು ನಿಜಕ್ಕೂ ಶೋಚನೀಯವಾಗಿದೆ...

ಈ ರೀತಿ ತಾಳೆಗೆ ಸಿಗದಂತಾ ಕಳಪೆ ಕಾಮಗಾರಿಯಿಂದಾಗ ಎಲ್‌ಬಿಎಸ್ ನಗರದ ನಿವಾಸಿಗಳು ಬೇಸತ್ತು ಹೋಗಿದ್ದಾರೆ. ಇಂತಹ ಸರ್ಕಾರದ ಹಣವನ್ನು ದುರುಪಯೋಗ ಮಾಡುವವರ ವಿರುದ್ಧ ಕಠಿಣ ಕ್ರಮ ವಾಗಬೇಕು ವ್ಯವಸ್ಥಿತವಾದ ಟೆಂಡರ್ ಕರೆದು ಮೊದಲು ಮೂಲಭೂತ ಅಗತ್ಯಗಳನ್ನು (ಬೇಸಿಕ್ ನೀಡ್ಸ್ ಉದಾ: ಕುಡಿಯುವ ನೀರು, ವಿದ್ಯುತ್ತ ದೀಪ) ಪೂರೈಸಿದ ನಂತರ ರಸ್ತೆ ಕಾಮಗಾರಿಗಳು ಚಾಲನೆಯಾಗಬೇಕು ಇದರಿಂದ ರಸ್ತೆಯನ್ನು ಪದೇ ಪದೇ ಅಗೆಯುವುದು ಸೇರಿದಂತೆ ಅನೇಕ ದುಂದು ವೆಚ್ಚಗಳಿಗೆ ಕಡಿವಾಣ ಹಾಕಿದಂತಾಗುತ್ತದೆ. ಇದು ಸಾರ್ವಜನಿಕ ಹಣ ಅಂದರೆ ನಮ್ಮ ಹಣವಲ್ಲವೇ?? ಕೂಡಲೇ ಇದಕ್ಕೆ ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆ ಉತ್ತರ ನೀಡಬೇಕಾಗಿದೆ... ಓಂದೆಡೆ ಎಡೆದೊರೆನಾಡು ಉತ್ಸವ ನಮ್ಮೆಲ್ಲರಿಗೂ ಸಂತೋಷ ತಂದಿದೆ.. ಆದರೇ ಈ ರೀತಿ ಚಿಕ್ಕ ಪುಟ್ಟ ಸಮಸ್ಯೆಗಳು ನಿವಾರಣೆಯಾದರೇ ರಾಯಚೂರಿನ ಅಭಿವೃದ್ದಿ ಉನ್ನತಕ್ಕೇರುವುದು ಸಂಶಯವೇ ಇಲ್ಲ.

**** ಮೊದಲು ಓಣಿಯ ಟೈಲ್ಸ್ ರಸ್ತೆ ನಿರ್ಮಾಣ ಮಾಡಿದ್ದಾರೆ, ನಂತರ ಯುಜಿಡಿ ಕಾರ್ಯಾರಂಭವಾಗಿದ್ದು, ಅದಕ್ಕೆ ಮನೆಯಿಂದ ಪೈಪ್‌ಲೈನ್ ಕನೆಕ್ಷನ್ ಕೊಡಲು ನಿರ್ಮಾಣವಾದ ಟೈಲ್ಸ್ ರಸ್ತೆ ಒಡೆಯಬೇಕಾಗಿದ್ದು ಗೊಂದಲ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಂತಾಗಿದೆ.**

**– ಅರವಿಂದ, ಎಲ್‌ಬಿಎಸ್ ನಗರ ನಿವಾಸಿ**

*** ಮೊದಲು ಈ ಏರಿಯಾದಲ್ಲಿ ಕುಡಿಯುವ ನೀರಿನ ನಳವೇ ಇಲ್ಲ , ಮೊದಲು ದೇವಸ್ಥಾನಕ್ಕೆ ನೀರಿಲ್ಲ,, ಬೋರ್‌ವೆಲ್ ಹಾಕಿದ್ರೂ ಕೆಲವೊಮ್ಮೆ ಕೆಟ್ಟು ನಿಂತಾಗ, ಕುಡಿಯುವ ನೀರಿಗೆ ಬಡಿದಾಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.**

**– ರವಿಕುಮಾರ್**

**ಎಲ್‌ಬಿಎಸ್ ನಗರ ನಿವಾಸಿ**

---

# ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪ್ರತಿಭಾನ್ವೇಶಣೆ ಕಾರ್ಯಕ್ರಮ: ರಮೇಶಬಾಬು ಯಾಳಗಿ




ಧೈರ್ಯದ ದಾರಿ

**ಮಾನ್ವಿ,ಫೆ.3–** ಪಟ್ಟಣದ ಕಲ್ಮಠ ಪದವಿ ಪೂರ್ವ ಕಾಲೇಜಿನಲ್ಲಿ ಲಿಂ.ಡಾ.ಶಿವಮೂರ್ತಿಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯಸ್ಮರಣೆ ಅಂಗವಾಗಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ಸಿದ್ದತೆ ಹಾಗೂ ಪ್ರತಿಭಾನ್ವೇಶಣೆ ಕಾರ್ಯಕ್ರಮದಲ್ಲಿ ಲಿಂ.ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸಿ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಉಪನ್ಯಾಸ ನೀಡಿ ಹಿರಿಯ ಸಾಹಿತಿ ರಮೇಶಬಾಬು ಯಾಳಗಿ ಮಾತನಾಡಿ ವಿದ್ಯಾರ್ಥಿಗಳು ಶಾಲೆಯಲ್ಲಿ ಶಿಕ್ಷಕರು ಹೇಳುವ ಪಠ್ಯಕ್ರಮವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು, ಪ್ರತಿ ವಿಷಯಕ್ಕೂ ನಿರ್ದಿಷ್ಟ ಸಮಯ ನಿಗದಿಪಡಿಸಿಕೊಂಡು, ನಿಯಮಿತವಾಗಿ ಅಭ್ಯಾಸ ಮಾಡುವುದರಿಂದ ಮತ್ತು ಹಳೆಯ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಬಿಡಿಸುವುದರಿಂದ ಪರೀಕ್ಷೆಯ ಮಾದರಿ ತಿಳಿಯುತ್ತದೆ ಮತ್ತು ಆತ್ಮವಿಶ್ವಾಸ ಹೆಚ್ಚುತ್ತದೆ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಕೊಳ್ಳುವುದಕ್ಕೆ ಕೂಡ ಸಾಧ್ಯವಾಗುತ್ತದೆ.

ಜೀವನದ ಪ್ರತಿ ಕ್ಷಣದಲ್ಲಿಯು ಕೂಡ ಅನೇಕ ಪರೀಕ್ಷೆಗಳನ್ನುನಾವುಗಳು ಎದುರಿಸಬೇಕಾಗುತ್ತದೆ ಅದ್ದರಿಂದ ಸೋಲು ಮತ್ತು ಗೇಲುವುಗಳನ್ನು ಸಹಜವಾಗಿ ಸ್ವೀಕರಿಸಿದಾಗ ಮಾತ್ರ ಜೀವನದಲ್ಲಿ ಯಶಸ್ಸನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸಂಸ್ಥೆಯ ಆಡಳಿತಾಧಿಕಾರಿ ಸಂಗಯ್ಯಸ್ವಾಮಿ ಮಾತನಾಡಿ ಪ್ರತಿ ವರ್ಷ ಕಲ್ಮಠ ಕಾಲೇಜು ವತಿಯಿಂದ ತಾಲೂಕಿನ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರತಿಭ ಆನ್ವೇಶಣಾ ಪರೀಕ್ಷೆಯನ್ನು ನಡೆಸಿ ಪ್ರತಿಭವಂತ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕೆ ಅನುಕೂಲವಾಗುವಂತೆ ಅತಿ ಹೆಚ್ಚು ಅಂಕಗಳನ್ನು ಪಡೆದ ಕನ್ನಡ ಹಾಗೂ ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳಿಗೆ ಪ್ರಥಮ ಬಹುಮಾನವಾಗಿ 15 ಸಾವಿರ ರೂ ಹಾಗೂ ದ್ವೀತಿಯ ಬಹುಮಾನವಾಗಿ 10 ಸಾವಿರ ರೂ ನೀಡಿ ಸನ್ಮಾನಿಸಿ ಗೌರವಿಸಲಾಗುವುದು ಎಂದು ತಿಳಿಸಿದರು.

ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಎಸ್.ಎಸ್.ಪಾಟೀಲ ,ಕಲ್ಮಠ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯ ಕೆಮ್ಯಾನಾಯಕ, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಪ್ರಭಯ್ಯ ಸ್ವಾಮಿ, ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಸಿದ್ದನಗೌಡ ಪಾಟೀಲ, ಎನ್.ಎಸ್.ಎಸ್.ಅಧಿಕಾರಿ ವಿರುಪಣ್ಣ ಪಾಟೀಲ್ ಉಪನ್ಯಾಸಕ ಅಯ್ಯಪ್ಪ ವಿಶ್ವಕರ್ಮ, ಹನುಮಂತಪ್ಪ ಇದ್ದರು.

## ಫೆ.5ರಂದು ಮಧ್ಯಾಹ್ನ 1 ಗಂಟೆಯಿಂದ ಕರ್ನಾಟಕ ಸಂಘದಿಂದ ಮೆರವಣಿಗೆ, ಬೈಕ್ ರ್‍ಯಾಲಿ ವಿಶೇಷ

**ರಾಯಚೂರು ಫೆ.3–:** ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ನಿಮಿತ್ತ ಫೆ.5ರಂದು ಮಧ್ಯಾಹ್ನ 1 ಗಂಟೆಗೆ ಕರ್ನಾಟಕ ಸಂಘದಿಂದ ಉತ್ಸವದ ಜಾಥಾ ಮತ್ತು ಬೈಕ್ ರ್‍ಯಾಲಿ ಕಾರ್ಯಕ್ರಮ ನಡೆಯಲಿದ್ದು, ಮೆರವಣಿಗೆಯು ಕರ್ನಾಟಕ ಸಂಘದಿಂದ ಆರಂಭವಾಗಿ ಬಂಗಾರ ಬಜಾರ್, ಡಾ.ಬಿ.ಆರ್.ಅಂಬೇಡ್ಕರ್ ವೃತ್ತ, ಬಸವೇಶ್ವರ ವೃತ್ತದ ಮಾರ್ಗವಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದವರೆಗೆ ಸಂಚರಿಸಲಿದೆ. ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಬೈಕ್ ರ್‍ಯಾಲಿ ನಡೆಯಲಿದೆ.

ಈ ಮೆರವಣಿಗೆಯಲ್ಲಿ ವೀರಗಾಸೆ, ಹಗಲುವೇಷ, ಚಿಲಿಪಿಲಿ ಗೊಂಬೆ, ಕೀಲುಕುದುರೆ, ಜಾಂಜಮೇಳ, ಹಗಲುವೇಷ, ಕಣಿಹಲಗೆ, ಡೊಳ್ಳುಕುಣಿತ, ತಾಷಾರೊಂಡಾಲಾ, ಶಹನಾಯಿ ವಾದನ, ಲಂಬಾಣಿ ನೃತ್ಯ, ಕೊಂಬುಕಹಳೆ, ಗೊರವ ಕುಣಿತ, ತಮಟೆವಾದನ, ನಾಸಿಕಡೊಳ್ಳು, ಮಹಿಳಾ ಡೊಳ್ಳು, ಕಹಳೆವಾದನ, ಸೋಮನಕುಣಿತ, ನಂದಿಧ್ವಜ ಮತ್ತು ಸಮಾಳ, ಭದ್ರಕಾಳಿ ಕುಣಿತ, ಸತ್ತೀಗೆ ಕುಣಿತ, ಜಗ್ಗಲಗಿ, ಕೋಳಿ ಕುಣಿತ, ಕರಡಿ ಮಜಲು ಸೇರಿದಂತೆ ನಾನಾ ಕಲಾಪ್ರಕಾರ ಕಲಾವಿದರು ಮೆರವಣಿಗೆಯಲ್ಲಿ ಭಾಗವಹಿಸಿ ಮೆರವಣಿಗೆಯ ಕಳೆ ಹೆಚ್ಚಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಫೆ.5ರಂದು ಕೃಷಿ ವಿಶ್ವವಿದ್ಯಾಲಯದ ಮುಖ್ಯ ವೇದಿಕೆಯಲ್ಲಿ ಫೈರ್ ಶೋ, ಸಂಜೆ 7ರಿಂದ ನೃತ್ಯ ಕಾರ್ಯಕ್ರಮ

**ರಾಯಚೂರು ಫೆ.3–** ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಅಂಗವಾಗಿ ಫೆ.05ರಂದು ಕೃಷಿ ವಿಶ್ವವಿದ್ಯಾಲಯದ ಮುಖ್ಯ ವೇದಿಕೆಯಲ್ಲಿ ಸಂಜೆ 5.30ಕ್ಕೆ ಮುಖ್ಯ ವೇದಿಕೆಯ ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾವಾರು ಶ್ರೇಷ್ಠ ಕೃಷಿಕ, ಕೃಷಿಕ ಮಹಿಳೆ ಪ್ರಶಸ್ತಿ ವಿಜೇತರಿಗೆ ಪ್ರಶಸ್ತಿ ಪ್ರಧಾನ ಪುರಸ್ಕೃತರ ಪರಿಚಯ ಕೃಷಿ ತಾಂತ್ರಿಕತೆಗಳ ಕೈಪಿಡಿ, ಹಸ್ತ ಪ್ರತಿ ಪ್ರಕಟಣೆಗಳ ಬಿಡುಗಡೆ ನಡೆಯಲಿದೆ.

ಸಂಜೆ 6.55ಕ್ಕೆ ಫೈರ್ ಶೋ ನಡೆಯಲಿದೆ. ಸಂಜೆ 7 ಗಂಟೆಗೆ ಎಕ್ಸಟೆಸ್ಸಿ ತಂಡದಿಂದ ನೃತ್ಯ ಕಾರ್ಯಕ್ರಮ, ಸಂಜೆ 7.15 ರಿಂದ 9.15ವರೆಗೆ ಸವಾರಿ ತಂಡದವರಿಂದ ಕಾರ್ಯಕ್ರಮ, ರಾತ್ರಿ 9.15 ರಿಂದ 9.30 ರವರೆಗೆ ಎಕ್ಸ್ಟೆಸ್ಸಿ ತಂಡದಿಂದ ನೃತ್ಯ ಕಾರ್ಯಕ್ರಮ ಹಾಗೂ ರಾತ್ರಿ 9.40 ರಿಂದ 11.00 ರವರೆಗೆ ಸಂಜಿತ್ ಹೆಗಡೆ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

## ಫೆ.5ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ವೇದಿಕೆ 01ರಲ್ಲಿನ ಸಾಂಸ್ಕೃತಿಕ ಕಾರ್ಯಕ್ರಮಗಳು

**ರಾಯಚೂರು ಫೆ.3–** ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ನಿಮಿತ್ತ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ವೇದಿಕೆಯಲ್ಲಿ ಫೆ.5ರ ಸಂಜೆ 4 ಗಂಟೆಯಿಂದ 5.30ರವರೆಗೆ ಪಂಡಿತ ನರಸಿಂಹಲು ವಡವಟ್ಟಿ ಅವರಿಂದ ಕ್ಲಾರಿನೇಟ್ ವಾದನ, ಶರಣಪ್ಪ ಗೋನಾಳ ಅವರಿಂದ ಜಾನಪದ ಗಾಯನ, ವೀರುಪಾಕ್ಷ ವಂದಲಿ ಅವರಿಂದ ಹಿಂದೂಸ್ಥಾನಿ ಶಾಸ್ತ್ರಿಯ ಸಂಗೀತ, ಸೂಗೂರೇಶ ಅಸ್ಕಿಹಾಳ ಅವರಿಂದ ಹಿಂದುಸ್ಥಾನಿ ಶಾಸ್ತ್ರಿಯ ಸಂಗೀತ, ನಬಿ ಬೇಗ್ ರಾಯಚೂರು ಅವರಿಂದ ಗಜಲ್, ಮುದ್ದುಮೋಹನ ರಾಯಚೂರು ಅವರಿಂದ ಹಿಂದುಸ್ಥಾನಿ ಸಂಗೀತ, ಶ್ರೇಯಸ್ ಜೋಷಿ ಅವರಿಂದ ಭರತನಾಟ್ಯ, ಗೋಪಾಲ ಗುಡಿಬಂಡಿ ರಾಯಚೂರು ಅವರಿಂದ ತಬಲಾವಾದನ, ವಿಷ್ಣುದೇಸಾಯಿ ಅವರಿಂದ ಏಕಪಾತ್ರಭಿನಯ, ಶಾಂತಕುಲಕರ್ಣಿ ಶಕ್ತಿನಗರ ಅವರಿಂದ ಜಾನಪದ ಸಂಗೀತ ನಡೆಯಲಿವೆ.

ಮುರಳಿಧರ ಕುಲಕರ್ಣಿ, ಮರಿಮಳ ದಿಕ್ಷೀತ್, ಭಾವನಿ ಲೋಕೇಶ ಅವರು ನಿರೂಪಿಸುವರು.

## ಫೆ.5ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ವೇದಿಕೆ 02ರಲ್ಲಿನ ಸಾಂಸ್ಕೃತಿಕ ಕಾರ್ಯಕ್ರಮಗಳು

**ರಾಯಚೂರು ಫೆ.3–**ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ನಿಮಿತ್ತ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ವೇದಿಕೆ 2ರಲ್ಲಿ ಫೆ.5ರ ಬೆಳಗ್ಗೆ 11ರಿಂದ ಸಂಜೆ 5.30ರವರೆಗೆ ವಿವಿಧ ಸಾಂಸ್ಕೃತಿ ಕಾರ್ಯಕ್ರಮಗಳು ನಡೆಯಲಿವೆ.

ಬೆಳಿಗ್ಗೆ 11ರಿಂದ ಆರಂಭವಾಗುವ ಕಾರ್ಯಕ್ರಮದಲ್ಲಿ ಶಶಿಧರ್ ಒಂದಲಿ ಅವರಿಂದ ವಚನ ಗಾಯನ, ಅಮರೇಶ ಸಾಲಿಮಠ ಅವರಿಂದ ಸುಗಮ ಸಂಗೀತ, ಶಾಂತಾ ಬಲ್ಲಟಗಿ ಅವರಿಂದ ಸುಗಮ ಸಂಗೀತ, ವಸುಂಧರ ವಿ, ಹೋಸಪೇಟೆ ಅವರಿಂದ ಭರತನಾಟ್ಯ, ರಮೇಶ ಹಸಮಕಲ್ ಅವರಿಂದ ಸುಗಮ ಸಂಗೀತ, ಮಲ್ಲಣ್ಣ ಹರವಾಳ ಅವರಿಂದ ಜಾನಪದ ಗಾಯನ, ಸಂಗನಗೌಡ ರಾಮತಾಳ ಅವರಿಂದ ಹಂತಿಪದಗಳು, ಜಾವೀದ್ ಅವರಿಂದ ಗಜಲ್, ಗುಲಾಮ್ ಹೈದಾರ್ ಅವರಿಂದ ಗಜಲ್, ಅನ್ವರಿ ಅವರಿಂದ ಕವಾಲಿ, ಸುಭಾಷ್ ಅಸ್ಕಿಹಾಳ ಅವರಿಂದ ತತ್ವಪದಗಳು ನಡೆಯಲಿವೆ.

## ಫೆ.5ರಂದು ಜಗಜ್ಯೋತಿ ಬಸವೇಶ್ವರ ಆಡಿಟೋರಿಯ ಸಭಾಂಗಣದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು

**ರಾಯಚೂರು ಫೆ.3–** ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ನಿಮಿತ್ತ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಆವರಣದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರ ಆಡಿಟೋರಿಯಂ ಸಭಾಂಗಣದಲ್ಲಿ ಬೆಳಗ್ಗೆ 11ರಿಂದ ಸಂಜೆ 7 ಗಂಟೆವರೆಗೆ ವಿವಿಧ ಸಾಂಸ್ಕೃತಿ ಕಾರ್ಯಕ್ರಮಗಳು ನಡೆಯಲಿವೆ.

ಬೆಳಗ್ಗೆ 11 ಗಂಟೆಗೆ ಆರಂಭವಾಗುವ ಈ ಸಭಾಂಗಣದಲ್ಲಿ ಬೂದಯ್ಯ ಯಾದಗಿರಿ ಅವರಿಂದ ಸುಗಮ ಸಂಗೀತ, ಯಂಕನಗೌಡ ದಿದ್ದಿಗಿ ಅವರಿಂದ ಭಕ್ತಿಗೀತೆ, ಅಲ್ಲಭಕ್ಷಿ ಸಿಂಧನೂರು ಅವರಿಂದ ಜನಪದ ಗಾಯನ, ಬಸವರಾಜ ದಿನ್ನಿ ಅವರಿಂದ ದಾಸರ ಪದಗಳು, ಚೈತ್ರಮ್ಮ ಮಾಟುರ ಅವರಿಂದ ಸಂಪ್ರದಾಯ ಪದಗಳು, ಜಯಸಿಂಹ ಪೇರೂರ ಅವರಿಂದ ಸಂಗೀತ ಗಾಯನ, ಸುಜಾತ ಜೋಷಿ ಅವರಿಂದ ದಾಸವಾಣಿ, ಶ್ರೀನಿವಾಸ ಸಿಗ್ನೆಚರ್ ಡ್ಯಾನ್ಸ್ ಗ್ರೂಪ್ ರಾಯಚೂರು ಅವರಿಂದ ಸಮೂಹ ನೃತ್ಯ, ಬಸಮ್ಮ ಜಾಲಿಹಾಳ ಅವರಿಂದ ಪಾರಿಜಾತ ಭಜನೆ, ಸಂಗೀತ, ಶರಣಮ್ಮ ಉಪಲದೊಡ್ಡಿ ಅವರಿಂದ ಸಂಪ್ರದಾಯ ಪದಗಳು, ಹನುಮಮ್ಮ ಬಸಪೂರ ಕೆ. ರಾಯಚೂರು ಅವರಿಂದ ಸೋಬಾನೆ ಪದಗಳು, ವಿಶ್ವನಾಥ ರಾಯಚೂರು ಅವರಿಂದ ಜನಪದ ಗೀತೆ, ನಟರಾಜ ರಾಯಚೂರು ಅವರಿಂದ ಸ್ಯಾಕ್ಸೋಫೋನ್, ದೇವರಾಜ ಡಿ. ಬೆಂಗಳೂರು ಅವರಿಂದ ಕಥಾ ಕೀರ್ತನ, ಲಕ್ಷ್ಮಣ ಕೊಪ್ಪರ ಅವರಿಂದ ಭಕ್ತಿಗೀತೆ, ನರಸಿಂಹಲು ಮರ್ಚೆಡ್ ಅವರಿಂದ ಹಂತಿಪದಗಳು, ಅಕ್ಷಯ ಜೋಷಿ ಲಿಂಗಸೂಗೂರು ಅವರಿಂದ ತಬಲಾವಾದನ ಸೋಲೋ, ಪ್ರಭಾ ಕೆ. ಕಂಬಾರ ಅವರಿಂದ ಸುಗಮ ಸಂಗೀತ, ಅನ್ನಪೂರ್ಣಬಾಯಿ ರಾಯಚೂರು ಅವರಿಂದ ಭಕ್ತಿಗೀತೆಗಳು ನಡೆಯಲಿವೆ.

## ಫೆ.5ರಂದು ಜಿಲ್ಲಾ ರಂಗಮಂದಿರದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು

**ರಾಯಚೂರು ಫೆ.3–** ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ನಿಮಿತ್ತ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಫೆ.5ರಂದು ಬೆಳಿಗ್ಗೆ 11ರಿಂದ ಸಂಜೆ 5ರವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಬೆಳಗ್ಗೆ 11 ರಿಂದ ಆರಂಭವಾಗುವ ಕಾರ್ಯಕ್ರಮದಲ್ಲಿ ಅಲ್ತಾಪ್ ರಂಗ ಮಿತ್ರ ರಾಯಚೂರು ಅವರಿಂದ ನಾಟಕ, ವಿ.ಎನ್. ಅಕ್ಕಿ ರಾಯಚೂರು ಅವರಿಂದ ಸಮುದಾಯ, ಪ್ರವೀಣ ರೆಡ್ಡಿ ಗುಂಜಹಳ್ಳಿ ಅವರಿಂದ ನಾಟಕ, ಲಕ್ಷ್ಮಣ ಮಂಡಲಗೇರಾ ರಾಯಚೂರು ಅವರಿಂದ ನಾಟಕ, ಹನುಮಂತಪ್ಪ ಜಾಲಿಬೆಂಚಿ ರಾಯಚೂರು ಅವರಿಂದ ನಾಟಕ, ಉರುಕುಂದಪ್ಪ ಅವರಿಂದ ರಂಗಭೂಮಿ, ಈರಣ್ಣ ಸೇನನಪಲ್ಲಿ ರಾಯಚೂರು ಅವರಿಂದ ನಾಟಕ, ಅಣವೀರಯ್ಯ ರಾಯಚೂರು ಅವರಿಂದ ನಾಟಕ, ರಂಗಸ್ವಾಮಿ ರಾಯಚೂರು ಅವರಿಂದ ಬಯಲಾಟ, ವೆಂಕಟ ನರಸಿಂಹಲು ರಾಯಚೂರು ಅವರಿಂದ ಪೌರಾಣಿಕ ನಾಟಕ, ರಂಗಚೇತನ ಸಾಂಸ್ಕೃತಿಕ ಕಲಾಸಂಘ ರಾಯಚೂರು ಅವರಿಂದ ನಾಟಕ, ದೇವಣ್ಣ ಎಲೆ ಬಿಚ್ಚಾಲಿ ಅವರಿಂದ ನಾಟಕ ನಡೆಯಲಿದೆ. ನಿರೂಪಣೆಯನ್ನು ವೈಶಂಪಾಯನ ಜೋಷಿ, ಪ್ರಸನ್ನ ಕುಮಾರ ರಾಯಚೂರು, ಶ್ರೀಕೃಷ್ಣ, ರಾಘವೇಂದ್ರ ರಾಯಚೂರು ಅವರು ನಡೆಸಿಕೊಡಲಿದ್ದಾರೆ.

## ಫೆ.5ರಂದು ಮಹಿಳಾ ಸಮಾಜ ಆವರಣದಲ್ಲಿ ಕವಿಗೋಷ್ಠಿ, ವಿಚಾರಗೋಷ್ಠಿ

**ರಾಯಚೂರು ಫೆ.3–**ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಅಂಗವಾಗಿ ಫೆಬ್ರವರಿ 05ರಂದು ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 1.30ರವರೆಗೆ ನಗರದ ಜಿಲ್ಲಾ ಕಾರಾಗೃಹ ಹತ್ತಿರದ ಮಹಿಳಾ ಸಮಾಜ ಆವರಣದಲ್ಲಿ ಕವಿಗೋಷ್ಠಿ ನಡೆಯಲಿದೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ರಂಗಣ್ಣ ಪಾಟೀಲ್ ಅಳ್ಳುಂಡಿ ಅವರು ಉದ್ಘಾಟನೆ ನೆರವೇರಿಸುವರು. ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರು ಹಾಗೂ ಕವಿ ಅನುವಾದಕರಾದ ಚಿದಾನಂದ ಸಾಲಿ ಅವರು ಆಶಯ ನುಡಿಗಳನ್ನಾಡುವರು. ಲಿಂಗಸುಗೂರಿನ ಸಾಹಿತಿಗಳಾದ ಗಿರಿರಾಜ ಹೊಸಮನಿ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಈರಣ್ಣ ಬಿರಾದಾರ್, ಸಾಹಿತಿ ಬಿ.ಜಿ.ಹುಲಿ, ರಾಯಚೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ಡಾ.ಬಿ.ವಿಜಯ ರಾಜೇಂದ್ರ, ಸಿಂಧನೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ಎಚ್.ಎಫ್.ಮಸ್ಕಿ ಅವರು ಭಾಗಿಯಾಗಲಿದ್ದಾರೆ.

ಭಾಗವಹಿಸುವ ಕವಿಗಳು: ಪಂಪಾಪತಿ ಶಾಸ್ತ್ರಿ, ಮಲ್ಲಣ್ಣ ಹರವಾಳ, ಮಹಾದೇವ ಎಸ್. ಪಾಟೀಲ್, ಖಾನ್ ಸಾಬ್ ಮೋಮಿನ್, ಜೆ.ಎಂ.ಶರಣಯ್ಯ ಸ್ವಾಮಿ, ಡಾ.ಹುಸೇನಪ್ಪ ಅಮರಾಪುರ, ಡಾ.ಸತೀಶ್ ಕುಮಾರ್ ಎಸ್.,

ಅನಿಲರಾಜ್ ಜೆ., ಮಹಾಂತೇಶ ಹೀರಾ, ಬಶೀರ್ ಅಹ್ಮದ್ ಹೊಸಮನಿ, ಅಮರಗುಂಡಪ್ಪ ಹೂಗಾರ, ದೇವರಾಜ್ ಎಸ್. ಬಪ್ಪೂರ, ಚಂದ್ರಶೇಖರ ನಾಡಗೌಡ, ಚಿದಾನಂದ ಕರಿಗೂಳಿ, ದುರುಗಪ್ಪ ಗುಡದೂರು, ಎಸ್.ಎನ್.ಅಲೆಕ್ಸಾಂಡರ್, ಅಖೀಲ್ ಅಹ್ಮದ್ ಅನ್ಸಾರಿ, ಬಸವರಾಜ ಜಂಗಮರಹಳ್ಳಿ, ರುದ್ರಪ್ಪ ಎಸ್ ತಳವಾರ, ವೆಂಕಟೇಶ ಗುಡೂರ, ಮಹೇಶ ಹಿಂದಿ ಶಿಕ್ಷಕ, ಕಾಶಿನಾಥ ಬಳಿಗಾರ, ರಾಮಕೃಷ್ಣ ನಾಯಕ, ಮಲ್ಲಿಕಾರ್ಜುನ ನಾಯಕ, ಕೆ. ಸತ್ಯನಾರಾಯಣ, ಪಲುಗುಲ ನಾಗರಾಜ, ಡಾ.ವೆಂಕಟೇಶ ನವಲಿ, ರಾಮಣ್ಣ ಬೋಯೆರ್, ಡಾ.ಎಸ್.ಜಿ.ಪಾಟೀಲ, ಲಕ್ಷ್ಮಣ ಬಾರಿಕೇರ, ವೆಂಕಟೇಶ ಬುಕ್ಕನೂರು, ಎಂ.ರಾಮಚಂದ್ರರಾವ್, ಮುರಳೀಕೃಷ್ಣ, ದೇವೇಂದ್ರ ಹುಡಾ, ಮಹಾಂತೇಶ ಗವಿಗಟ್ಟ, ಡಾ. ಅಮರಾಪುರ ಹೆಚ್.ಡಬ್ಲ್ಯು, ಶ್ರೀಧರರಾವ್ ದೇಸಾಯಿ, ಎಸ್.ಶಿವಮೂರ್ತಿ, ಗೋಪಿನಾಥ ದೇಸಾಯಿ, ರಾಘವೇಂದ್ರ ಕವಿತಾಳ, ಪ್ರಸನ್ನ ಪಟವಾರಿ, ಮುರುಗೇಶ ಕುಂಬಾರ, ಡಾ.ಸುನೀಲ್ ಕುಮಾರ್ ಪರೀಟ್, ಡಾ.ಶಾಮಸುಂದರ ಪಟವಾರಿ, ಪಿ.ವೆಂಕಟೇಶ ಬಾಗಲವಾಡ, ಸಣ್ಣ ಯಲ್ಲಪ್ಪ, ಮಂಜುನಾಥ ಗುತ್ತೇದಾರ, ಸೂಗೂರೇಶ ಹಿರೇಮಠ, ರಾಘವೇಂದ್ರ ವಿ.ಹೆಚ್., ರಘುನಾಥರೆಡ್ಡಿ ಮನ್ನಾಲಾಪುರ, ಶಂಕರರಾವ್ ಉಭಾಳೆ, ಡಾ.ತಿಮ್ಮಯ್ಯ ಶೆಟ್ಟಿ ಇಲ್ಲೂರ, ದೇವನಪಲ್ಲಿ ಶ್ರೀನಿವಾಸ್, ಸಿದ್ದಣ್ಣ ನಿಲೋಗಿ, ಸಿದ್ಧಾರ್ಥ ವಲ್ಲಭ, ಮಹಾಂತಸ್ವಾಮಿ ಉಪ್ರಾಳ, ರಾಯಸ್ವಾಮಿ ಪೆದ್ದರಾಯ, ನೀಲಕಂಠಯ್ಯ ಮಳಿಮಠ ಗಲಗ, ಇಮಾಮುದ್ದೀನ್ ಮಾಡಗಿರಿ, ಕೆ.ಮಲ್ಲಿಕಾರ್ಜುನ ಕವಿತಾಳ, ಜಿ.ಶರಣ ಬಸವರಾಜ್, ಶರಣಪ್ಪ ಗಬ್ಬೂರು, ಅಮರಯ್ಯ ಘಂಟಿ, ಚಂದ್ರಶೇಖರ ಮದ್ಲಾಪುರ, ವೀರೇಶ್ ಗೋನವಾರ, ಭೀರಪ್ಪ ಶಂಭೋಜಿ, ಸಿ.ದಾನಪ್ಪ, ಶಕೀಲ್ ಉಸ್ತಾದ್, ಮಹಾದೇವ ಹಳ್ಳಿ, ಶಿವಪ್ಪ ಪಾಟೀಲ ಜಾನೇಕಲ್, ಮಂಜುನಾಥ ಸಾಹುಕಾರಮನಿ, ಆನಂದ ಶಿಲ್ಪಿ ಜಕ್ಕೂರ, ಸಿ.ಹನುಮಂತರಾಯ ಕವಿತಾ ವಾಚನ ಮಾಡುವರು.

ಕಾರ್ಯಕ್ರಮದ ನಿರೂಪಣೆ ಅಣ್ಣಪ್ಪ ಮೇಟಿಗೌಡ, ಸ್ವಾಗತ ರಾವುತ್‌ರಾವ್ ಬರೂರ, ವಂದನಾರ್ಪಣೆ ವಿಜಯಲಕ್ಷ್ಮೀ ಅಸ್ಕಿಹಾಳ ಹಾಗೂ ನಿರ್ವಹಣೆಯನ್ನು ನಾಗಪ್ಪ ಹೊರಪ್ಯಾಟಿ ಅವರು ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಫೆ.5ರಂದು ಮಹಿಳಾ ಸಮಾಜ ಆವರಣದಲ್ಲಿ ಮಧ್ಯಾಹ್ನ 3ರಿಂದ ಸಾಹಿತ್ಯ ಸಂಸ್ಕೃತಿ ಗೋಷ್ಠಿ

**ರಾಯಚೂರು ಫೆ.3–** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಅಂಗವಾಗಿ ಫೆಬ್ರವರಿ 05ರಂದು ಮಧ್ಯಾಹ್ನ 3ರಿಂದ 4 ಗಂಟೆವರೆಗೆ ಸಾಹಿತ್ಯ ಸಂಸ್ಕೃತಿ ಗೋಷ್ಠಿಯನ್ನು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಉದ್ಘಾಟಿಸುವರು.

ಹಿರಿಯ ಸಾಹಿತಿ ವೀರ ಹನುಮಾನ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ತಹಸೀಲ್ದಾರ ಅಮರೇಶ ಬಿರಾದಾರ, ಆದಿಜಾಂಬವ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ರಾಜೇಂದ್ರ ಜಲ್ದಾರ, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಮಸ್ಕಿ ನಾಗರಾಜ ಉಪಸ್ಥಿತರಿರುವರು.

ರಾಯಚೂರು ಜಿಲ್ಲೆಯ ಇತಿಹಾಸ ಕುರಿತು ಹಂಪಿ ವಿಶ್ವವಿದ್ಯಾಲಯದ ಅಧ್ಯಯನಾಂಗದ ನಿರ್ದೇಶಕರಾದ ಡಾ.ಅಮರೇಶ ಯತಗಲ್ ಅವರು ಉಪನ್ಯಾಸ ನೀಡುವರು. ರಾಯಚೂರು ಜಿಲ್ಲೆಯ ಸಾಹಿತ್ಯ ಹಿರಿಮೆ ಕುರಿತು ಹಿರಿಯ ಸಾಹಿತಿ ವೆಂಕಟರಾವ್ ಕುಲಕರ್ಣಿ ಉಪನ್ಯಾಸ ನೀಡುವರು. ರಾಯಚೂರು ಜಿಲ್ಲೆಯ ಮಕ್ಕಳ ಸಾಹಿತ್ಯ ಕುರಿತು ಹಿರಿಯ ಮಕ್ಕಳ ಸಾಹಿತಿ ಭಾರ್ಗವಿ ದೇಸಾಯಿ ಅವರು ಉಪನ್ಯಾಸ ನೀಡುವರು.

ದಂಡಪ್ಪ ಬಿದಾದಾರ ನಿರೂಪಿಸುವರು. ತಾಯಪ್ಪ ಬಿ ಹೊಸೂರ ಸ್ವಾಗತಿಸುವರು. ಮಹಾಂತೇಶ ಹೀರಾ ನಿರ್ವಹಣೆ ಮಾಡುವರು. ವಿಜಯಕುಮಾರ ವಂದಿಸುವರು.

## ಫೆ.5ರಂದು ಮಹಿಳಾ ಸಮಾಜ ಆವರಣದಲ್ಲಿ ಮಧ್ಯಾಹ್ನ 4ರಿಂದ ವಚನ, ದಲಿತ, ಬಂಡಾಯ, ಸಾಹಿತ್ಯಗೋಷ್ಠಿ

**ರಾಯಚೂರು ಫೆ.3–**ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಅಂಗವಾಗಿ ಫೆಬ್ರವರಿ 05ರಂದು ಮಧ್ಯಾಹ್ನ 4 ರಿಂದ 5.30ರವರೆಗೆ ನಡೆಯುವ ವಚನ, ದಲಿತ, ಬಂಡಾಯ ಸಾಹಿತ್ಯಗೋಷ್ಠಿಯನ್ನು ಹಿರಿಯ ಸಾಹಿತಿ ಬಾಬು ಭಂಡಾರಿಗಲ್ ಉದ್ಘಾಟಿಸುವರು.ಕನ್ನಡ ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಭಗತರಾಜ್ ನಿಜಾಮಕಾರಿ ಆಶಯ ನುಡಿಗಳನ್ನಾಡುವರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಡಾ.ಸಿ.ಬಿ.ಚಿಲ್ಕರಾಗಿ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಹಿರಿಯ ಸಾಹಿತಿ ಡಾ.ಅಮರೇಶ ನುಗಡೋಣಿ, ಬಂಡಾಯ ಸಾಹಿತಿ ಸಿ ದಾನಪ್ಪ, ಸಿರವಾರ ತಾಲೂಕು ಕಸಾಪ ಅಧ್ಯಕ್ಷರಾದ ಮೌನೇಶ ಹಣಗಿ, ಮಸ್ಕಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ವಿದ್ಯಾವತಿ ವಣಕಿ ಉಪಸ್ಥಿತರಿರುವರು. ರಾಯಚೂರು ಜಿಲ್ಲೆಯಲ್ಲಿ ವಚನ ಸಾಹಿತ್ಯ ಕುರಿತು ಲೇಖಕಿ ಡಾ.ಸರ್ವಮಂಗಳ ಸಕ್ರಿ ಅವರು ಉಪನ್ಯಾಸ ನೀಡುವರು. ರಾಯಚೂರು ಜಿಲ್ಲೆಯ ದಲಿತ ಸಾಹಿತ್ಯ ಕುರಿತು ಮಾನವಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಡಾ.ಜೆ.ಎಲ್.ಈರಣ್ಣ ಉಪನ್ಯಾಸ ನೀಡುವರು. ರಾಯಚೂರು ಜಿಲ್ಲೆಯ ಬಂಡಾಯ ಸಾಹಿತ್ಯ ಕುರಿತು ಸಾಹಿತಿ ಡಾ.ದಸ್ತಗೀರಸಾಬ ದಿನ್ನಿ ವಿಶೇಷ ಉಪನ್ಯಾಸ ನೀಡುವರು. ವೈ.ಕೆ.ಯಶೋಧ ನಿರೂಪಿಸುವರು. ರಾಜಾಶಂಕರ ಅವರು ಸ್ವಾಗತಿಸುವರು. ಡಾ.ಶಿವಲೀಲಾ ಬಸನಗೌಡ ವಂದಿಸುವರು.

## ಫೆ.5ರಂದು ಮಹಿಳಾ ಸಮಾಜ ಆವರಣದಲ್ಲಿ ರಾತ್ರಿ 9 ರಿಂದ ಉರ್ದು ಮುಷಾಯಿರಾ ಕಾರ್ಯಕ್ರಮ

**ರಾಯಚೂರು ಫೆ.3–** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಅಂಗವಾಗಿ ಫೆಬ್ರವರಿ 05ರಂದು ರಾತ್ರಿ 9 ರಿಂದ ಉರ್ದು ಮುಷಾಯಿರಾ ಕಾರ್ಯಕ್ರಮ ನಡೆಯಲಿದೆ.

ಹಿರಿಯ ಉರ್ದು ಕವಿ ವಹೀದ್ ವಾಹೀದ್ ಅಧ್ಯಕ್ಷತೆ ವಹಿಸುವರು. ಕವಿ ಡಾ.ಇಫ್ತಿಕಾರ್ ಶಕೀಲ್ ನಿರ್ವಹಣೆ ಮಾಡುವರು. ಕೇಂದ್ರ ಯುವ ಸಾಹಿತ್ಯ ಅಕಾಡೆಮಿ ಪುರಷ್ಕೃತರಾದ ಕವಿ, ಅನುವಾದಕ ಆರೀಫ್ ರಾಜಾ ಅಶಯನುಡಿಗಳನ್ನಾಡುವರು. ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಈರಣ್ಣ ಬಿರಾದಾರ ಹಾಗೂ ಹಿರಿಯ ಸಾಹಿತಿ ವೀರ ಹನುಮಾನ ಅವರು ಗೌರವ ಉಪಸ್ಥಿತಿ ವಹಿಸುವರು.ಉರ್ದು ಕವಿಗಳಾದ ನುಸ್ರತ್ ಮೆಹದಿ, ಬೊಪಾಲ್, ಸರ್ದಾರ್ ಸಲೀಂ, ಹೈದ್ರಾಬಾದ್, ಮೆಹಕ್ ಕೆರಾನ್ವಿ, ಇರ್ಫಾನ್ ರಾಯಚೂರು, ಮಿಸ್ಕಿನ್ ರಾಯಚೂರು, ಜಿಶಾನ್ ಶಾದ್, ಹರ್ಷದ್ ನದೀಂ ದೆಹಲಿ, ಶಫೀಕ್ ಅಬಿದಿ, ಬೆಂಗಳೂರು, ಸುಂದರ್ ಮಾಲೆಗಾನ್ವಿ, ಅಖಿಲ್ ಯಾವರ್, ವಹಾಬ್ ಆಜಾದ್, ಶೋಯೇಬ್ ಮದ್ನಿ, ಜಾವಿದ್ ಫೆರೋಜಾಖಾದಿ, ಯು.ಪಿ., ಜಮೀಲ್ ಬನಾರಸಿ, ಯು.ಪಿ., ಡಾ.ಇಫ್ತಿಕಾರ್ ಶಕೀಲ್, ಇಂಡಿಯನ್ ಭಾಷಾ, ತಯ್ಯಬ್ ಖಾದ್ರಿ, ಜಹೀರುದ್ದೀನ್ ಅವರು ಈ ಉರ್ದು ಮುಷಾಯಿರಾ ನಡೆಸಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಗೌಪ್ಯತೆ ನೀತಿ ಉಲ್ಲಂಘನೆ:ಮೆಟಾಗೆ ಸುಪ್ರೀಂ ತರಾಟೆ

**ನವದೆಹಲಿ,ಪೆ.3–** ಗೌಪ್ಯತೆ ನೀತಿ ಉಲ್ಲಂಘನೆ ಕುರಿತು ಟೆಕ್ ದೈತ್ಯ ಮತ್ತು ವಾಟ್ಸಾಪ್ ಮಾತೃ ಸಂಸ್ಥೆ ಮೆಟಾ, ಇನ್‌ಸ್ಟೆಂಟ್ ಮೆಸೇಜಿಂಗ್ ಪ್ಲಾಟ್‌ಫಾರ್ಮ್ ವೇದಿಕೆಗಳನ್ನು ಸುಪ್ರೀಂ ಕೋರ್ಟ್‌ನಿಂದ ತರಾಟೆಗೆ ತೆಗೆದುಕೊಂಡಿದೆ.

ದೇಶದ ಸಂವಿಧಾನ ಪಾಲನೆ ಮಾಡಲು ಸಾಧ್ಯವಾಗದಿದ್ದರೆ, ಭಾರತವನ್ನು ಬಿಟ್ಟು ಹೋಗಿ. ನಾಗರಿಕರ ಗೌಪ್ಯತೆಗೆ ಧಕ್ಕೆಯಾಗಲು ನಾವು ಬಿಡುವುದಿಲ್ಲ" ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ, ಎಚ್ಚರಿಕೆ ನೀಡಿದೆ. ದೇಶದ ನಾಗರಿಕರ ಗೌಪ್ಯತೆಯ ಜೊತೆ ಆಟವಾಡಲು ಸಾಧ್ಯವಿಲ್ಲ..ಡೇಟಾದ ಒಂದೇ ಒಂದು ಅಂಕೆಯನ್ನು ಹಂಚಿಕೊಳ್ಳಲು ನಿಮಗೆ ಅವಕಾಶ ನೀಡುವುದಿಲ್ಲ" ಎಂದು ಅಮೆರಿಕದ ಕಂಪನಿಗೆ ಛೀಮಾರಿ ಹಾಕಿದೆ. ಜೊತೆಗೆ ಗೌಪ್ಯತೆಯ ನೀತಿ ಉಲ್ಲಂಘನೆ ವಿಷಯದಲ್ಲು ಭಾರತೀಯರ ಶೋಷಣೆ ಅವಕಾಶ ನೀಡುವುದಿಲ್ಲ ಎಂದು ನ್ಯಾಯಪೀಠ ಹೇಳಿದೆ.ನ್ಯಾಯಾಲಯ, ವಾಟ್ಸಾಪ್‌ನ 2021 ರ ಗೌಪ್ಯತೆ ನೀತಿಗೆ ಸಂಬಂಧಿಸಿದ ಅರ್ಜಿಯನ್ನು ವಿಚಾರಣೆ ನಡೆಸುತ್ತಿತ್ತು, ನಿರ್ದಿಷ್ಟವಾಗಿ ಕಂಪನಿ ಕಾನೂನು ನ್ಯಾಯಮಂಡಳಿಯು ಭಾರತದ ಸ್ಪರ್ಧಾ ಆಯೋಗದ 213 ಕೋಟಿ ರೂ. ದಂಡವನ್ನು ಎತ್ತಿಹಿಡಿ ದಿದೆ.ಜಾಹಿರಾತು ಉದ್ದೇಶಗಳಿಗಾಗಿ ಬಳಕೆದಾರರ ಡೇಟಾವನ್ನು ಹಂಚಿಕೊಳ್ಳುವ ಬಗ್ಗೆ ಸಿಸಿಐ ನಿಂದ ಮೇಲ್ಮನವಿ ಕೂಡ ಇತ್ತು, ಕಂಪನಿಯು 'ಅಧಿಕಾರದ ದುರುಪಯೋಗ' ಮಾಡಿಲ್ಲ ಎಂದು ತೀರ್ಪು ನೀಡಿದ ನಂತರ ನ್ಯಾಯಮಂಡಳಿ ಇದನ್ನು ಅನುಮೋದಿಸಿದೆ.ಸರ್ಕಾರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ವಾಣಿಜ್ಯ ಉದ್ದೇಶಕ್ಕಾಗಿ ಬಳಕೆದಾರರ ಡೇಟಾವನ್ನು ಹಂಚಿಕೊಳ್ಳುವ "ಶೋಷಣಾ" ನೀತಿಯನ್ನು ಟೀಕಿಸಿದ್ದಾರೆ.ದೇಶದ ಲಕ್ಷಾಂತರ ಬಡ ಮತ್ತು ಅವಿದ್ಯಾವಂತ ಜನರಿಗೆ ನೀತಿ ಅರ್ಥವಾಗುತ್ತದೆಯೇ ಎಂದು ಕೇಳುವುದೂ ಸೇರಿದಂತೆ ನ್ಯಾಯಾಲಯ ನೀತಿಯ ಬಗ್ಗೆ ಸ್ಪಷ್ಟವಾದ ಅವಲೋಕನಗಳನ್ನು ಮಾಡಿದೆ. ಬಡ ಮಹಿಳೆ ಅಥವಾ ರಸ್ತೆಬದಿಯ ವ್ಯಾಪಾರಿ, ಅಥವಾ ತಮಿಳು ಮಾತ್ರ ಮಾತನಾಡುವ ಯಾರಿಗಾದರೂ ಅರ್ಥವಾಗುತ್ತದೆಯೇ ಎಂದು ಪ್ರಶ್ನಿಸಿದೆ. "ಕೆಲವೊಮ್ಮೆ ನಿಮ್ಮ ನೀತಿಗಳನ್ನು ಅರ್ಥಮಾಡಿಕೊಳ್ಳಲು ನಮಗೂ ಕಷ್ಟವಾಗುತ್ತದೆ ಎಂದು ಹೇಳಿದ ನ್ಯಾಯಾಲಯ ಮೆಟಾ ಮತ್ತು ವಾಟ್ಸಾಪ್ ಅನ್ನು ಕಟುವಾಗಿ ಟೀಕಿಸಿದೆ ಹಾಗಾದರೆ ಗ್ರಾಮೀಣ ಬಿಹಾರದಲ್ಲಿ ವಾಸಿಸುವ ಜನರು ಅವುಗಳನ್ನು ಹೇಗೆ ಅರ್ಥಮಾಡಿಕೊಳ್ಳುತ್ತಾರೆ ಇದು ಖಾಸಗಿ ಮಾಹಿತಿಯ ಕಳ್ಳತನದ ಒಂದು ಮಾರ್ಗವಾಗಿದೆ ಎಂದಿದ್ದಾರೆ.

# ಬದುಕನ್ನು ರೂಪಿಸಿದ ದಿಕ್ಸೂಚಿಗಳ ಕುರಿತು ಇರಲಿ.... ಕೃತಜ್ಞತಾ ಭಾವ

1957 ರ ಅಕ್ಟೋಬರ್ ರಲ್ಲಿ ತನ್ನ 43ನೇ ವಯಸ್ಸಿನಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತಗೊಂಡ ಆ ವ್ಯಕ್ತಿ ತನ್ನ ಸಂತಸವನ್ನು ತನ್ನ ಕುಟುಂಬ ಮತ್ತು ತನ್ನ ಬೆಂಬಲಿಗರೊಂದಿಗೆ ಹಂಚಿಕೊಳ್ಳುವುದಕ್ಕಿಂತ ಮುನ್ನ ತನಗೆ ಪಾಠ ಕಲಿಸಿದ ಶಾಲೆಯ ಗುರುಗಳಿಗೆ ಪತ್ರ ಬರೆದು ಹಂಚಿಕೊಂಡ. ಆತನಿಗೆ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿ ದೊರಕಿದ್ದು ಹಾಗೆ ನೊಬೆಲ್ ಪ್ರಶಸ್ತಿ ಪುರಸ್ಕೃತ ವ್ಯಕ್ತಿಗಳಲ್ಲಿ ಅತ್ಯಂತ ಕಿರಿಯ ವಯಸ್ಸಿನ ವ್ಯಕ್ತಿ ಆತನಾಗಿದ್ದ. ತನ್ನ ವಾರಿಗೆಯ ಜನರ ಆತ್ಮವೇ ಆತ ಎಂದು ವಿಮರ್ಶಕರು ಆತನನ್ನು ಬಣ್ಣಿಸಿದ್ದರು. ಬಡತನದ ದವಡೆಯಲ್ಲಿ ಸಿಲುಕಿ ಓದಲು ಸಾಧ್ಯವಾಗದೆ ಇದ್ದ ತನ್ನನ್ನು ಓದಿಸಿ ಬರೆಸಿ ವಿದ್ಯಾವಂತನನ್ನಾಗಿಸಿದ ಗುರುವಿಗೆ ತಾನೆಂದಿಗೂ ಕೃತಜ್ಞ ಎಂದು ಆತ ಪತ್ರದಲ್ಲಿ ಬರೆದಿದ್ದ.

ತನಗೆ ನೊಬೆಲ್ ಪ್ರಶಸ್ತಿಯನ್ನು ಕೊಡ ಮಾಡುವ ಸಂಸ್ಥೆಯಿಂದ ಬಂದ, ಐತಿಹಾಸಿಕವಾಗಿ ತನ್ನ ಹೆಸರನ್ನು ಉಳಿಸುವ ಆ ಪತ್ರವನ್ನು ಓದಿ ಅದನ್ನು ಮಡಚಿಟ್ಟ ಆತ ತನ್ನ ಗುರುಗಳಿಗೆ ಪತ್ರ ಬರೆಯಲು ಆರಂಭಿಸಿದ.

ಆತನಿಗೆ ಟೆಲಿಗ್ರಾಂ ಬಂದು ಕೆಲ ನಿಮಿಷಗಳು ಕಳೆದಿರಬಹುದು. ಆತನ ಮನೆಯ ಬಾಗಿಲಿಗೆ ನೂರಾರು ಪತ್ರಕರ್ತರು ಹಾಜರಾದರು. ಪತ್ರಿಕೆಯ ಪ್ರಕಾಶಕರು, ಅಭಿಮಾನಿಗಳು, ಸಂದರ್ಶಕರು ಆತನ ಮನೆಯ ಮುಂದೆ ನೆರೆಯಲಾರಂಭಿಸಿದರು. ಟೆಲಿಫೋನಿನ ಗಂಟೆ ಮೊಳಗುವುದು ನಿಲ್ಲಲಿಲ್ಲ..... ಆದರೆ ಇದೆಲ್ಲಕ್ಕೂ ಮುನ್ನ ತನಗೆ ಬಂದ ಯಶಸ್ಸು, ಸಾಧಿಸಿದ ವಿಜಯ ಹಾಗೂ ಅದರ ಹಿಂದೆ ತಾನು ಮೈಗೂಡಿಸಿಕೊಂಡಿರುವ ತತ್ವಶಾಸ್ತ್ರದ ಕುರಿತು ಆತ ಯೋಚಿಸಲಿಲ್ಲ.

ಪ್ರಶಸ್ತಿಯ ಕುರಿತಾದ ಪತ್ರವನ್ನು ಓದಿ ಜೇಬಿನಲ್ಲಿಟ್ಟುಕೊಂಡ ಆತನ ನೆನಪಿಗೆ ಮೊದಲು ಬಂದದ್ದು ಆತನ ತಾಯಿ ನಂತರ ಆತನ ಮನಸ್ಸು ಆತನ ಬಾಲ್ಯದ ದಿನಗಳತ್ತ ತೆರಳಿ ಅಲ್ಜೀರಿಯಾದ ಶಾಲೆಯೊಂದರಲ್ಲಿ ತಾನು ಓದುತ್ತಿದ್ದ ತರಗತಿಯ ಖಾಲಿ ಕೋಣೆಯಲ್ಲಿ ಪುಟ್ಟ ಬಾಲಕನಾಗಿ ಬಡತನವನ್ನೇ ಹಾಸಿ ಹೊದ್ದ ತನ್ನ ಕಣ್ಣುಗಳಲ್ಲಿ ದಿಟ್ಟಿಸಿ ನೋಡಿ ತನಗೆ ಭವ್ಯವಾದ ಭವಿಷ್ಯವಿದೆ ಎಂದು ಯೋಚಿಸಿದ ಶಿಕ್ಷಕರನ್ನು ನೆನೆದ.

ಕೂಡಲೇ ಆಲ್ಬರ್ಟ್ ಕೇಮಸ್ ತನ್ನ ಬರೆಯುವ ಮೇಜಿನ ಬಳಿ ಬಂದು ಕುಳಿತು ಎಲಿಮೆಂಟರಿ ಶಾಲೆಯಲ್ಲಿ ತನಗೆ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ ಲೂಯಿಸ್ ಜರ್ಮನ್ ಎಂಬ ಶಿಕ್ಷಕರಿಗೆ ಪತ್ರ ಬರೆಯಲು ಆರಂಭಿಸಿದ. ಇಷ್ಟೆಲ್ಲಾ ಸಂಭ್ರಮವನ್ನು ಅನುಭವಿಸುವುದನ್ನು ಬಿಟ್ಟು ಅಲ್ಬರ್ಟ್ ಪತ್ರ ಬರೆಯಲು ಆರಂಭಿಸಿದನೇ ಎಂದು ಅಚ್ಚರಿ ಪಡಬೇಕಾಗಿಲ್ಲ.... ಆತನ ಬಾಲ್ಯದ ಬದುಕಿನ ಪುಟಗಳನ್ನು ಹಿಂತಿರುಗಿಸಿ ನೋಡಿದರೆ ನಮಗೆ ಆತನ ಮನದ ತವಕ ಅರ್ಥವಾದೀತು.

1913 ರ ನವಂಬರ್ 7ರಂದು ಫ್ರೆಂಚ್ ಅಲ್ಜೀರಿಯಾದ ಮಾಂಡೋವಿ ಎಂಬ ಊರಿನಲ್ಲಿ ಅತ್ಯಂತ ಬಡತನದಿಂದ ಕೂಡಿದ ಒಂದು ಕುಟುಂಬದಲ್ಲಿ ಆಲ್ಬರ್ಟ್ ಕೇಮಸ್ ಜನಿಸಿದ. ಆತನಿಗೆ ಇನ್ನೂ ಒಂದು ವರ್ಷ ತುಂಬುವ ಮುನ್ನವೇ ಆತನ ತಂದೆ ಲೂಸಿಯನ್ ಅನ್ನು ಮೊದಲ ಮಹಾಯುದ್ಧ ಬಲಿ ತೆಗೆದುಕೊಂಡಿತ್ತು. ತಾಯಿ ಬೇರೊಬ್ಬರ ಮನೆಯ ಕಸ ಗುಡಿಸಿ, ನೆಲ ಒರೆಸುವ ಕೆಲಸವನ್ನು ನಿರ್ವಹಿಸಿ ತನ್ನ ಮಕ್ಕಳ ಹೊಟ್ಟೆ ಹೊರೆಯುತ್ತಿದ್ದಳು.

ಈಗಾಗಲೇ ಶಿಥಿಲವಾದ ಒಂದು ದುಡಿಯುವ ವರ್ಗದ ಅಪಾರ್ಟ್ಮೆಂಟ್ನಲ್ಲಿ ಅತ್ಯಂತ ಕಷ್ಟದಿಂದ ಜೀವಿಸುತ್ತಿದ್ದ ಅವರ ಮನೆಗೆ ನೀರು, ವಿದ್ಯುತ್ ಸಂಪರ್ಕಗಳು ಇರಲಿಲ್ಲ ಪುಸ್ತಕಗಳಂತೂ ತುಂಬಾ ದೂರ. ಹಾಸಿ ಹೊದೆಯುವಷ್ಟಿದ್ದ ತಣ್ಣಗಿನ ಬಡತನ ಅವರ ಮಕ್ಕಳ ಭವಿಷ್ಯವನ್ನು ನುಂಗಿ ಹಾಕಿತ್ತು.

ಕುಟುಂಬದ ಸದಸ್ಯರೆಲ್ಲರೂ ದುಡಿದರೆ ಮಾತ್ರ ಎಲ್ಲರೂ ಒಂದು ಹೊತ್ತು ಊಟ ಮಾಡಬಹುದು ಎಂಬಂತಹ ಪರಿಸ್ಥಿತಿಯಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ಪಾಲಕರಿಬ್ಬರು ದುಡಿಯಲು ಹೋಗಬಹುದು ಎಂಬುದು ಅವರನ್ನು ಶಾಲೆಗೆ ಕಳುಹಿಸಲು ಕಾರಣವಾಗಿತ್ತು. ದುಡಿಯುವ ವರ್ಗದ ಜನ ಕೂಡುವ, ಕಳೆಯುವ, ಅಕ್ಷರವನ್ನು ಅರಿಯುವ ಮೂಲಭೂತವಾದ ಕಲಿಕೆಯನ್ನು ಮಾತ್ರ ಕಲಿತು ನಂತರ ದುಡಿಮೆಗೆ ಹೋಗಬೇಕಾದ ಅನಿವಾರ್ಯತೆ ಅವರಿಗಿತ್ತು.

ತಮ್ಮಲ್ಲೊಬ್ಬ ಮಹಾನ್ ಲೇಖಕ ಉದಿಸುತ್ತಾನೆ ಎಂಬ ದೂರದೃಷ್ಟಿ ಅವರಲ್ಲಿ ಇರಲೇ ಇಲ್ಲ. ಅತ್ಯಂತ ತೆಳು ಕಾಯದ, ಶಾಂತವಾದ, ಗಮನಾರ್ಹವಾದ ಚೂಟಿ ಬಾಲಕನಾಗಿದ್ದ ಆಲ್ಬರ್ಟ್ ಶಾಲೆಯಲ್ಲಿ ಒಂದೆಡೆ ಕುಳಿತು ಕೊಳ್ಳುತ್ತಿದ್ದ. ಆತನ ಕುತೂಹಲದ ಕಣ್ಣುಗಳನ್ನು ದಿಟ್ಟಿಸಿ ಕೂಲಂಕುಶವಾಗಿ ಪರಿಶೀಲಿಸಿದ ಲೂಯಿಸರಿಗೆ ಆತನ ಕಲಿಕಾ ಆಸಕ್ತಿ, ಇಚ್ಚೆಯಿಂದ ಪಾಠವನ್ನು ಕೇಳುವ ಆಸಕ್ತಿ ಗುರುಗಳು ಆತನತ್ತ ಹೆಚ್ಚು ಗಮನ ಹರಿಸಲು ಕಾರಣವಾದವು ಒಬ್ಬ ಒಳ್ಳೆಯ ಶಿಕ್ಷಕ ಮಕ್ಕಳ ಆಸಕ್ತಿಯನ್ನು ಗಮನಿಸುವಂತೆ ಲೂಯಿಸ್ ಜರ್ಮನ್ ಕೂಡ ಬಾಲಕನ ಆಸಕ್ತಿಗೆ ನೀರೆರೆದು ಆತನ ಭವಿಷ್ಯಕ್ಕೆ ಅತ್ಯುತ್ತಮ ಬುನಾದಿ ಹಾಕಿದರು.

ಬಾಲಕನಿಗೆ ಸಾಕಷ್ಟು ಸಹಾಯ ಮಾಡುತ್ತಿದ್ದ ಅವರು ಆಲ್ಬರ್ಟ್ ನ ಕೈಯಲ್ಲಿ ಹತ್ತು ಹಲವು ಪುಸ್ತಕಗಳನ್ನು ಇಟ್ಟು ಅವುಗಳನ್ನು ಓದಲು ಹೇಳುತ್ತಿದ್ದರು. ಓದಿನ ಹಸಿವಿನಲ್ಲಿ ಬಡತನದ ಹಸಿವನ್ನು ಮರೆಯುತ್ತಿದ್ದ ಬಾಲಕನ ಆಸಕ್ತಿ ಕಂಡು ಶಾಲೆ ಮುಗಿದ ನಂತರವೂ ಕೂಡ ಆತನಿಗೆ ಹೊಸ ಹೊಸ ವಿಚಾರಗಳನ್ನು ತಿಳಿಸಿಕೊಡುವ,ಆತನ ಪ್ರಶ್ನೆಗಳಿಗೆ ಉತ್ತರಿಸುವ ಬಾಲಕನ ಮೆದುಳಿನ ಬಾಗಿಲನ್ನು ತೆರೆಯುವ ನಿಟ್ಟಿನಲ್ಲಿ ಗುರುಗಳು ಹೆಚ್ಚು ಆಸಕ್ತಿ ವಹಿಸಿದರು.

ಮಾಧ್ಯಮಿಕ ಶಾಲೆಗೆ ಕಡ್ಡಾಯವಾಗಿ ಬರೆಯಲೇಬೇಕಿದ್ದ ಪ್ರವೇಶ ಪರೀಕ್ಷೆಯಲ್ಲಿ ತನ್ನ ಹಿನ್ನೆಲೆಯನ್ನು ದಾಟಿ ಅತ್ಯುತ್ತಮ ವಿದ್ಯಾರ್ಥಿಯಾಗಿ ರೂಪುಗೊಳಿಸಿದ. ಅಲ್ಬರ್ಟ್ ಗೆ ಪ್ರತ್ಯೇಕವಾಗಿ ತರಬೇತಿ ನೀಡಿದ ಲೂಯಿಸ್ ಆತನನ್ನು ಪ್ರೋತ್ಸಾಹಿಸಿ ಸುಮ್ಮನಿರುವ ಮಕ್ಕಳು ಕೂಡ ಅವಕಾಶಕೊಟ್ಟರೆ ಚೆನ್ನಾಗಿ ಓದಬಲ್ಲರು ಎಂಬುದನ್ನು ಜಗತ್ತಿಗೆ ತೋರಿಸಿದ. ಆಲ್ಬರ್ಟ್ ಪರೀಕ್ಷೆಯಲ್ಲಿ ಪಾಸಾಗಿ ಮಾಧ್ಯಮಿಕ ಶಾಲೆಗೆ ನಂತರ ವಿಶ್ವವಿದ್ಯಾಲಯಕ್ಕೆ ತದನಂತರ ಪತ್ರಿಕೋದ್ಯಮ ಕಲಿಕೆಯಲ್ಲಿ ತೊಡಗಿಕೊಂಡ. ಜಗತ್ತಿನ ಎರಡನೇ ಮಹಾಯುದ್ಧದ ಕುರಿತಾದ ಪ್ರಬಂಧಗಳು, ಕಾದಂಬರಿಗಳು, ತತ್ವಶಾಸ್ತ್ರ ಹಾಗೂ ಅಂತರಾಷ್ಟ್ರೀಯ ವಿದ್ಯಮಾನಗಳ ಕುರಿತು ಆತ ಒಂದೇ ಸಮನೆ ಬರೆದ

ಆದರೆ ಇದೆಲ್ಲದರ ಹೊರತಾಗಿ ಪ್ರತಿಯೊಂದು ಪುಸ್ತಕ, ಪ್ರತಿಯೊಂದು ಹೊಸ ವಿಚಾರ, ಪ್ರತಿಯೊಂದು ಸಾಧನೆಯ ಹಿಂದೆ ತನ್ನನ್ನು ತಾನು ನಂಬುವಂತೆ ತನ್ನಲ್ಲಿ ಆತ್ಮವಿಶ್ವಾಸವನ್ನು ತುಂಬಿದ ತನ್ನ ಶಾಲೆಯ ಶಿಕ್ಷಕರ ಪಾತ್ರ ಬಹಳ ದೊಡ್ಡದು. ಬಡತನದ ಛಾಯೆಯಲ್ಲಿ ಆತನ ಪ್ರತಿಭೆ ಕಮರಿ ಹೋಗಲು ಲೂಯಿಸ್ ಜರ್ಮನ್ ಬಿಡಲಿಲ್ಲ.

ಇದನ್ನು ಆಲ್ಬರ್ಟ್ ಕೇಮಸ್ ಮರೆತಿರಲಿಲ್ಲ.
ದಶಕಗಳ ನಂತರ ನೊಬೆಲ್ ಪ್ರಶಸ್ತಿಗೆ ಆತ ಆಯ್ಕೆಯಾದ ಪತ್ರ ಆತನನ್ನು ತಲುಪಿದಾಗ ನೆನಪಿಸಿಕೊಂಡಿದ್ದು ತನಗೆ ಓದು ಮತ್ತು ಬರಹಗಳಲ್ಲಿ ಆಸಕ್ತಿಯನ್ನು ಮೂಡಿಸಿದ ತನ್ನ ಶಾಲಾ ಶಿಕ್ಷಕರಾದ ಮಾನ್ಸಿಯರ್ ಲೂಯಿಸ್ ಜರ್ಮನ್ ರನ್ನು. ಅಂತೆಯೇ ಆತ 1957ರ ನವಂಬರ್ 19ರ ರಾತ್ರಿ ಬರೆದ ಪತ್ರ ಕೃತಜ್ಞತೆಯ ಕುರುಹಾಗಿ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದುಕೊಂಡ ಪ್ರೀತಿ ಪೂರ್ವಕ ಪತ್ರವಾಗಿತ್ತು. ಆತ ಬರೆಯುವಾಗ ಆತನ ಮನೆಯ ಹೊರಭಾಗದಲ್ಲಿ ಆತನಿಗಾಗಿ ಕೂಡಿದ ಜನರ ಗದ್ದಲ ಕಡಿಮೆಯಾಗಿ ಸಂಪೂರ್ಣ ನಿಶ್ಯಬ್ದ ಆವರಿಸುವುದಕ್ಕೆ ಆತ ಕಾಯ್ದು ತನ್ನ ಹೃದಯದ ಮಾತುಗಳನ್ನು ಬರೆಯಲು ಕುಳಿತುಕೊಂಡ. ತನ್ನ ಸಾಧನೆಗೆ ದೊರೆತ ನೊಬೆಲ್ ಪ್ರಶಸ್ತಿ ಬಹಳ ದೊಡ್ಡದಾಗಿದ್ದು ಅಷ್ಟರಮಟ್ಟಿಗಿನ ಸಾಧನೆ ತನ್ನದಾಗಿಲ್ಲ.... ಅದೆಲ್ಲಾ ತನ್ನ ಶಿಕ್ಷಕರ ಕೃಪೆ ಎಂದು ಅತ್ಯಂತ ವಿನಮ್ರನಾಗಿ ಆತ ಬರೆದಿದ್ದನು.

ನೊಬೆಲ್ ಪ್ರಶಸ್ತಿ ಪ್ರಕಟವಾದ ಪತ್ರ ತನ್ನನ್ನು ತಲುಪಿದ ನಂತರ ತಾನು ಮೊದಲು ತಾಯಿಯನ್ನು ನಂತರ ಗುರುಗಳಾದ ತಮ್ಮನ್ನು ನೆನೆದುದನ್ನು ಅತ್ಯಂತ ಪ್ರಾಮಾಣಿಕವಾಗಿ ಬಿಚ್ಚಿಟ್ಟ ಆಲ್ಬರ್ಟ್, ಅತ್ಯಂತ ಬಡ ಕುಟುಂಬದ ಕುಡಿಯಾದ ತನ್ನ ಮೇಲೆ ಗುರುಗಳಾದ ಜರ್ಮನರ ಪ್ರೀತಿ, ತಾಳ್ಮೆ ಮತ್ತು ದಯೆ ತೋರದೆ ಹೋದಲ್ಲಿ ತನಗೆ ಇಂದು ಈ ಯಶಸ್ಸು ಸಾಧ್ಯವಾಗುತ್ತಿರಲಿಲ್ಲ ಎಂದು ತನ್ನ ಮನದ ಭಾವವನ್ನು
ಪತ್ರದಲ್ಲಿ ಬಿಚ್ಚಿಟ್ಟಿದ್ದರು. ಗುರುಗಳಾದ ಜರ್ಮನರ ಪ್ರಯತ್ನ ಹಾಗೂ ಗಂಟೆಗಟ್ಟಲೆ ಓರ್ವ ಬಡ ಪುಟ್ಟ ಬಾಲಕನ ಜೊತೆಗೆ, ಆತನ ಕಲಿಯುವಿಕೆಗೆ ವ್ಯಯ ಮಾಡಿದ ಕಾರಣವೇ ಎಂದು ಇಡೀ ಜಗತ್ತು ಆತನ ಯಶಸ್ಸನ್ನು ಆಚರಿಸುತ್ತಿದೆ ಎಂದು ಕೃತಜ್ಞತಾಪೂರ್ವಕವಾಗಿ ಹೇಳಿದರು.

ಬಹುದೊಡ್ಡ ಸಾಧನೆ, ಯಶಸ್ಸು ಮತ್ತು ಜನಮನ್ನಣೆ ಗಳಿಸಿದ ನಂತರ ಕೂಡ ಇಂದಿಗೂ ನಾನು ತಮ್ಮ ದಯೆಯ ಕೂಸು ಎಂದು ಪತ್ರದಲ್ಲಿ ಬರೆದುಕೊಂಡಿರುವ ರಾಬರ್ಟ್ ಈಗಲೂ ಕೂಡ ತನ್ನಲ್ಲಿ ಅಲ್ಜೀರಿಯಾದ ದಯಾಳು ಶಿಕ್ಷಕರು ನಂಬಿ ಗುರುತಿಸಿ ಬೆಳೆಸಿದ ಬಡ ಹುಡುಗ ಇದ್ದಾನೆ ಎಂದು ತೋಡಿಕೊಂಡಿದ್ದಾರೆ.

ಹೀಗೆ ತನ್ನ ಗುರುಗಳಿಗೆ ಒಂದು ಪತ್ರವನ್ನು ಬರೆಯುವಾಗ ಆಲ್ಬರ್ಟ್ ರಲ್ಲಿ ಓರ್ವ ಯಶಸ್ವಿ ವ್ಯಕ್ತಿಯ ಭಾವ ಖಂಡಿತವಾಗಿಯೂ ಇರಲಿಲ್ಲ, ಬದಲಾಗಿ ತನ್ನ ಮನದಾಳದ ಭಾವಗಳನ್ನು ಪುಟ್ಟ ಬಾಲಕನೊಬ್ಬ ತನ್ನ ತಾಯಿಯ ಬಳಿ ನಿವೇದಿಸಿಕೊಂಡ ರೀತಿಯಲ್ಲಿಯೇ ಅವರ ಒಕ್ಕಣೆ ಇತ್ತು. ಆತನ ಇಂದಿನ ಬೆಳವಣಿಗೆಯಲ್ಲಿ ಗುರುಗಳ ಪಾಲು ಸಾಕಷ್ಟಿದೆ ಎಂಬುದನ್ನು ಆತ ಮತ್ತೆ ಮತ್ತೆ ನೆನಪು ಮಾಡಿಕೊಂಡಿದ್ದ.

ಲೂಯಿಸ್ ಜರ್ಮನ್ ಇದೀಗ ಮುದುಕರಾಗಿದ್ದು ಆಲ್ಬರ್ಟ್ ನ ಪತ್ರಕ್ಕೆ ಅವರು ಹೀಗೆ ಮರುತ್ತರ ಬರೆದರು ಅದರಲ್ಲಿ ಅವರು ಆಲ್ಬರ್ಟನನ್ನು ಗುರುತಿಸಿದ ಕೀರ್ತಿಯನ್ನು ತಮ್ಮದಾಗಿಸಿಕೊಳ್ಳಲಿಲ್ಲ ಬದಲಾಗಿ ತಮ್ಮ ಓರ್ವ ಹಳೆಯ ವಿದ್ಯಾರ್ಥಿ ತಾನು ನೀಡಿದ ಶಿಕ್ಷಣದ ಪರಿಣಾಮವಾಗಿ ಬದುಕಿನಲ್ಲಿ ಅರ್ಥಪೂರ್ಣವಾದ ಯಶಸ್ಸನ್ನು ಸಾಧಿಸಿರುವುದಕ್ಕೆ ಸಂತಸವನ್ನು ವ್ಯಕ್ತಪಡಿಸಿದ್ದರು. ಆಲ್ಬರ್ಟ್ ಕೆಮಸ ತಮ್ಮಲ್ಲಿರುವ ಗುರುವಿಗೆ ನಿಜವಾದ ಪುರಸ್ಕಾರವನ್ನು ನೀಡಿದ್ದಾನೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು. ವಿದ್ಯಾರ್ಥಿಯೊಬ್ಬ ತಮ್ಮ ಗುರುಗಳನ್ನು ನೆನಪಿಸಿಕೊಂಡು ಹೇಳಿರುವುದು ಯಾವುದೇ ಬಿರುದು ಬಾವಲಿಗಳಿಗಿಂತ, ದೊಡ್ಡ ಅಂಕಿಯ ಸಂಬಳಕ್ಕಿಂತ ಹೆಚ್ಚಿನದ್ದು ಎಂದು ಆತ ಅಭಿಪ್ರಾಯಪಟ್ಟರು.

ಮುಂದಿನ ವರ್ಷಗಳಲ್ಲಿ ಖಂಡಗಳನ್ನು ದಾಟಿ ಅವರಿಬ್ಬರೂ ಪರಸ್ಪರ ಪತ್ರ ಸಂಪರ್ಕದ ಮೂಲಕ ಭೇಟಿಯಾದರು. ಅವರ ಪತ್ರಗಳಲ್ಲಿ ಮಾನವೀಯ ಮಿಡಿತದ ತಂತುಗಳು ಹಾಗೂ ಚಿಕ್ಕ ಪುಟ್ಟ ಕ್ರಿಯೆಗಳ ಅಗಾಧ ಪರಿಣಾಮಗಳನ್ನು ನಾವು ಕಾಣಬಹುದು. 1960ರ ಜನವರಿ 4ರಂದು ತನ್ನ ಪುಸ್ತಕಗಳ ಪ್ರಕಾಶಕರಾದ ಮೈಕಲ್ ಗ್ಯಾಲಿಮರ್ಡರೊಂದಿಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಆಲ್ಬರ್ಟ್ ಕೇಮಸ್ ಕಾರು ರಸ್ತೆಯ ಬದಿಯ ಮರವೊಂದಕ್ಕೆ ಗುದ್ದಿದ ಪರಿಣಾಮವಾಗಿ ನಡೆದ ಅಪಘಾತದಲ್ಲಿ ಆಲ್ಬರ್ಟ್ ಸ್ಥಳದಲ್ಲಿಯೇ ಮೃತಪಟ್ಟರು, ಆಗ ಅವರಿಗೆ ಕೇವಲ 46 ವರ್ಷ ವಯಸ್ಸಾಗಿತ್ತು.

ಅವರ ಪುಟ್ಟ ಬ್ರೀಫ್ ಕೇಸಿನಲ್ಲಿ ಅಪೂರ್ಣವಾದ ಕಾದಂಬರಿಯ ಹಸ್ತ ಪ್ರತಿಯ ಜೊತೆಗೆ ಆತನ ಬದುಕಿನ ದಿಕ್ಕನ್ನು ಬದಲಾಯಿಸಿದ ಗುರುಗಳ ಕುರಿತಾದ ಮಾಹಿತಿಯನ್ನು ಹೊತ್ತ ಪತ್ರಗಳು ಹಾಗೂ ತಾಯಿಯೊಂದಿಗಿನ ಅವರ ಆತ್ಮಿಕ ಸಂಬಂಧದ ಕುರಿತ ಮಾಹಿತಿಗಳು ದೊರೆಯಿತು.

ಯಶಸ್ಸಿನ ಅತ್ಯುನ್ನತ ಶಿಖರದಲ್ಲಿ ಇದ್ದಾಗಲೂ ಕೂಡ ಆತ ತನ್ನನ್ನು ಅಲ್ಲಿಗೆ ತಲುಪಲು ಕೈ ಹಿಡಿದು ಮೊದಲ ಹೆಜ್ಜೆ ಇಡಲು ಪ್ರೇರೇಪಿಸಿದ ಗುರುಗಳನ್ನು ಮರೆಯದೆ ಅವರ ಪತ್ರಗಳನ್ನು ಸದಾ ತನ್ನೊಂದಿಗೆ ಒಯ್ಯುತ್ತಿದ್ದುದು
ಅವರ ನಡುವಿನ ಅವಿನಾಭಾವ ಸಂಬಂಧಕ್ಕೆ ಸಾಕ್ಷಿಯಾಗಿತ್ತು.

ಸ್ನೇಹಿತರೆ ! ಈ ಕಥೆ ಕೇವಲ ಅಲ್ಬರ್ಟ್ ಕೇಮಸ್ ಎಂಬ ನೊಬೆಲ್ ಪ್ರಶಸ್ತಿ ಪುರಸ್ಕೃತ ಸಾಹಿತಿಯದಲ್ಲ.... ಇದು ಲೂಯಿಸ್ ಜರ್ಮನ ರಂತಹ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸುವ, ಮಕ್ಕಳ ಜ್ಞಾನದ ಹಸಿವನ್ನು ತೀರಿಸುವ, ಅವರನ್ನು ಪ್ರೋತ್ಸಾಹಿಸುವ ಪ್ರತಿಯೊಬ್ಬ ನಿಸ್ವಾರ್ಥಿ ಶಿಕ್ಷಕರ ಕಥೆಯಾಗಿದೆ.

ಬೇರೆಯವರು ನೀವು ಕೇಳಿದ ಪ್ರಶ್ನೆಗಳನ್ನು ಅನವಶ್ಯಕ ಎಂದು ತಳ್ಳಿ ಹಾಕಿದ ಸಮಯದಲ್ಲಿ ದಿನಗಟ್ಟಲೆ ಕುಳಿತು ಆ ಪ್ರಶ್ನೆಗೆ ಉತ್ತರ ಹುಡುಕಿದ ಪ್ರತಿಯೊಬ್ಬ ಶಿಕ್ಷಕರ ಕಥೆ ಇದು.ತಾನು ಕಲಿಸಿದ ಮಗುವಿನ ಭವಿಷ್ಯದ ಕುರಿತಾಗಿ ಪತ್ರ ಬರೆದು ಶಿಫಾರಸು ಮಾಡಿದ ಶಿಕ್ಷಕರ ಕಥೆ ಇದು.

ಬಹಳಷ್ಟು ಜನರಿಗೆ ನೊಬೆಲ್ ಪ್ರಶಸ್ತಿಯ ನಂತರದ ಧನ್ಯವಾದ ಪತ್ರಗಳು ದೊರೆಯಲಿಕ್ಕಿಲ್ಲ ನಿಜ.ಬಹಳಷ್ಟು ಜನ ಶಿಕ್ಷಕರಿಗೆ ತಾವು ಮಕ್ಕಳಲ್ಲಿ ಬಿತ್ತಿದ ಯಾವ ಬೀಜ ಮೊಳಕೆಯೊಡೆದು ಬೃಹತ್ ಹೆಮ್ಮರವಾಗಿ ಬೆಳೆದು ನಿಂತಿದೆ ಎಂದು ಗುರುತಿಸುವ ಅವಕಾಶಗಳು ಸಿಗಲಿಕ್ಕಿಲ್ಲ. ಅವರ ವಿದ್ಯಾರ್ಥಿಗಳಲ್ಲಿ ಯಾರೋ ಒಬ್ಬರು ವೈದ್ಯರಾಗಿ ರೋಗಿಗಳ ಸೇವೆಯಲ್ಲಿ, ಅವರ ಜೀವವನ್ನು ಉಳಿಸುವಲ್ಲಿ, ನ್ಯಾಯಕ್ಕಾಗಿ ಹೋರಾಡುವ ವಕೀಲನಾಗಿ, ದೇಶವನ್ನು ಕಟ್ಟುವ ಇಂಜಿನಿಯರಾಗಿ ಮಕ್ಕಳ ಭವಿಷ್ಯವನ್ನು ಬರೆಯುವ ಶಿಕ್ಷಕನಾಗಿ ಎಲ್ಲರಿಗೂ ಅನ್ನ ನೀಡುವ ರೈತನಾಗಿ ತನ್ನ ಬದುಕನ್ನು ಕಟ್ಟಿಕೊಂಡಿರಬಹುದು ಎಂದು ಗೊತ್ತಿರಲಿಕ್ಕಿಲ್ಲ.... ಶಿಕ್ಷಕರು ನಮ್ಮ ಮಕ್ಕಳ ಭವಿಷ್ಯದ ಅಗೋಚರ ನಿರ್ಮಾತೃಗಳು.

ಆಲ್ಬರ್ಟ್ ಕೇಮಸ್ ನ ಬದುಕಿಗೆ ಹೊಸ ಹೊಳಹನ್ನು ತೋರಿಸಿಕೊಟ್ಟ ಗುರುಗಳೊಂದಿಗೆ ಪತ್ರ ವ್ಯವಹಾರ ಮಾಡಿ ತನ್ನ ಬದುಕಿನಲ್ಲಿ ಅವರ ಸ್ಥಾನವನ್ನು ತೋರಿಸಿಕೊಟ್ಟು ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾನೆ. ಸ್ನೇಹಿತರೆ! ಇದೀಗ ನಮ್ಮ ಪಾಳಿ. ನಮ್ಮ ಬದುಕಿನಲ್ಲಿ ನಮ್ಮ ಇಂದಿನ ಸಾಧನೆಗೆ ಕಾರಣವಾದ ರೀತಿಯಲ್ಲಿ ನಮ್ಮನ್ನು ಗುರುತಿಸಿ ತಾವು ಅಗೋಚರರಾಗಿ ಉಳಿದು ಹೋದ ಶಿಕ್ಷಕರಿಗೆ ಹೀಗೊಂದು ಪತ್ರ ಬರೆದು ಇಲ್ಲವೇ ಮುಖತಃ ಭೇಟಿಯಾಗಿ ನಾವು ಕೃತಜ್ಞತೆ ಹೇಳುವ ಸಮಯ ಇದಾಗಿದೆ.

ಯಶಸ್ಸು ಎನ್ನುವುದು ಕೇವಲ ಪತ್ರಿಕೆಯ ಹೆಡ್ ಲೈನ್ ಗಳಲ್ಲಿ ಬಂದು ಹೋಗುವ ವ್ಯಕ್ತಿಯದ್ದು ಮಾತ್ರವಲ್ಲ... ಆತನ ಪ್ರತಿ ಯಶಸ್ಸಿನ ಹಿಂದೆ ಇರುವ ಆತನ ಕುಟುಂಬದ ಸದಸ್ಯರು, ಶಿಕ್ಷಕರು ಆತನಿಗೆ ಬೆಂಬಲಿಸಿದವರು ಸಹಕಾರ ನೀಡಿದವರು ಹೀಗೆ ವ್ಯಕ್ತಿಯೊಬ್ಬನ ಯಶಸ್ಸಿನಲ್ಲಿ ಆತನ ಜೊತೆಗೆ ಇರುವ, ಈ ಹಿಂದೆ ಇದ್ದ ವ್ಯಕ್ತಿಗಳ ಪಾಲು ಬಹು ದೊಡ್ಡದು. ವ್ಯಕ್ತಿಯ ಬದುಕಿನ ದುರ್ಬರ ಗಳಿಗೆಗಳಲ್ಲಿ ಆತನನ್ನು ಎತ್ತಿ ಹಿಡಿದ, ಆತ್ಮವಿಶ್ವಾಸ ತುಂಬಿದ, ನಾವಿದ್ದೇವೆ ಭಯ ಬೇಡ ಎಂದು ಭರವಸೆ ನೀಡಿದ, ಆತನ ಪ್ರತಿಭೆಯಲ್ಲಿ ನಂಬಿಕೆ ಇಟ್ಟ ಆತನ ಬೆಳವಣಿಗೆಗೆ ಕಾರಣರಾದ ಹತ್ತು ಹಲವರ ಪಾಲಿರುತ್ತದೆ.

ಅಲ್ಬರ್ಟ್ ಕೇಮಸ್ ಗೆ ನೊಬೆಲ್ ಪ್ರಶಸ್ತಿ ದೊರೆತ ಪತ್ರವನ್ನು ಪಡೆದಾಗ ತಾನು ಅದನ್ನು ಪಡೆಯುವಷ್ಟು ಅರ್ಹತೆಯನ್ನು ಗಳಿಸಿಕೊಳ್ಳಲು ಕಾರಣರಾದವರನ್ನು ಮೊದಲು ನೆನೆದ ಪರಿಣಾಮವಾಗಿ ಬರೆದ ಕೃತಜ್ಞತಾ ಪತ್ರ ಕೇವಲ ಒಂದು ಮಾಹಿತಿ ಪತ್ರವಲ್ಲ ಬದಲಾಗಿ ಓರ್ವ ವ್ಯಕ್ತಿಯ ಗುರುತಿಸುವಿಕೆಯಾಗಿತ್ತು. ಕೃತಜ್ಞತೆಯಾಗಿತ್ತು. ಮನೆ ಕೆಲಸಗಳನ್ನು ಮಾಡಿ ತನ್ನನ್ನು ಶಾಲೆಗೆ ಓದಲು ಕಳುಹಿಸಿ ಬೆಳೆಸಿದ ತಾಯಿ, ತನಗಾಗಿ ಜಗತ್ತಿನ ಹತ್ತು ಹಲವು ಸುದ್ದಿಗಳನ್ನು ಶೈಕ್ಷಣಿಕ ವಿಷಯಗಳನ್ನು ಶಾಲೆ ಮುಗಿದ ನಂತರವೂ ಹೇಳಿಕೊಡುತ್ತಿದ್ದ ಶಿಕ್ಷಕರನ್ನು ಆತ ನೆನೆಯಲು ಕಾರಣ ಆತನಿಗೆ ಸ್ಪಷ್ಟವಾಗಿ ಗೊತ್ತಿತ್ತು. ಸುಂದರವಾದ ಹೂವು ಹಣ್ಣುಗಳನ್ನು ಕೊಡುತ್ತಿರುವ ಮರವೊಂದು ಅಷ್ಟು ಗಟ್ಟಿ ಮುಟ್ಟಾಗಿ ನೆಲದ ಮೇಲೆ ನಿಂತುಕೊಳ್ಳಲು ಕಾರಣವಾಗಿರುವುದು ಭೂಮಿಯ ತಳ ಭಾಗದಲ್ಲಿ ಮಣ್ಣಿನ ಸಾರವನ್ನು ಹೀರಿ ನೀರು ಮತ್ತು ಪೋಷಕಾಂಶಗಳನ್ನು ತನಗೆ ಕೊಡ ಮಾಡುತ್ತಿರುವ ಅಗೋಚರ ಬೇರುಗಳು ಎಂದು.

ಸ್ನೇಹಿತರೇ.. ಈಗಲೂ ಕಾಲ ಮಿಂಚಿಲ್ಲ. ನಮ್ಮ ಬದುಕಿಗೆ ದಾರಿ ತೋರಿದ ಪಾಲಕರನ್ನು, ಶಿಕ್ಷಕರನ್ನು, ಸಂಬಂಧಗಳನ್ನು, ಬೆಂಬಲಿಸಿದ ಸ್ನೇಹಿತರನ್ನು, ನೆರೆಹೊರೆಯವರನ್ನು ಗುರುತಿಸಿ ಅವರಿಗೆ ಕೃತಜ್ಞತೆ ಅರ್ಪಿಸೋಣ. ಬದುಕಿನ ಇಳಿಗಾಲದಲ್ಲಿ ಇರುವ ಎಷ್ಟೋ ಜೀವಿಗಳಿಗೆ ನಮ್ಮ ಈ ಒಂದು ಕೃತಜ್ಞತೆಯ ಮಾತು ಧನ್ಯತೆಯ ಮತ್ತು ನೆಮ್ಮದಿಯ ಭಾವವನ್ನು ಮೂಡಿಸಬಹುದು. ವಯಸ್ಸಿನ ಭಾರದಿಂದ ಬಾಗಿರುವ ಬೆನ್ನನ್ನು ನೇರವಾಗಿಸಿ ತೃಪ್ತಿಯ ಭಾವದಿಂದ ಎದೆಯನ್ನು ಉಬ್ಬಿಸಿ ಸಂತಸಪಡಬಹುದು. ಏನಂತೀರಾ?

**ವೀಣಾ ಹೇಮಂತಗೌಡ ಪಾಟೀಲ್, ಮುಂಡರಗಿ, ಗದಗ್**

# ದೇಶದ್ರೋಹ ಪದ ಬಳಕೆಗೆ ವಿಷಾದ

**ಬೆಂಗಳೂರು,ಫೆ.3–** ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ದೇಶದ್ರೋಹಿ ಪದ ಬಳಕೆ ಮಾಡಿದ ವಿಚಾರ ವಿಧಾನ ಪರಿಷತ್‌ನಲ್ಲಿಂದು 2ನೇ ದಿನವೂ ಬಾರಿ ಗದ್ದಲ ಕೋಲಾಹಲಕ್ಕೆ ವೇದಿಕೆಯಾಯಿತು. ಕಾಂಗ್ರೆಸ್ ಸದಸ್ಯ ನಸೀರ್ ಅಹ್ಮದ್ ಕ್ಷಮೆ ಕೇಳಬೇಕು ಎಂದು ಪ್ರತಿಪಕ್ಷಗಳು ಬಿಗಿ ಪಟ್ಟು ಹಿಡಿದ ಹಿನ್ನಲೆಯಲ್ಲಿ ನಸೀರ್ ಅಹ್ಮದ್ ಒತ್ತಡಕ್ಕೆ ಮಣಿದು ವಿಷಾದ ವ್ಯಕ್ತಪಡಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ದೇಶದ್ರೋಹಿ ಪದ ಬಳಸಿರುವ ಸದಸ್ಯ ನಸೀರ್ ಅಹಮದ್ ಕ್ಷಮೆಗೆ ಆಗ್ರಹಿಸಿ ಪ್ರತಿಪಕ್ಷಗಳ ಸದಸ್ಯರು ನಿನ್ನೆ ರಾತ್ರಿಯಿಂದ ಮೇಲ್ಮನೆಯಲ್ಲಿ ನಡೆಸಿದ ಧರಣಿಯನ್ನು ಇಂದು ಮುಂದುವರೆಸಿದರು.

ಕಲಾಪ ಅರಂಭವಾದ ಸದನದ ಬಾವಿಂಗಿಳಿದು ಧರಣಿ ಮುಂದುವರೆಸಿದ ಬಿಜೆಪಿ ಜೆಡಿಎಸ್ ಸದಸ್ಯರು ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಅಸಂಸದೀಯ ಪದ ಬಳಕೆ ಮಾಡಿರುವ ನಸೀರ್ ಅಹಮದ್ ಅವರಿಂದ ಕ್ಷಮೆ ಕೇಳಿಸಿ ಇಲ್ಲವೇ ಹೊರಹಾಕಿ ಎಂದು ಆಗ್ರಹಿಸಿದರು.
ಸಭಾಪತಿ ಬಸವರಾಜ್ ಹೊರಟ್ಟಿ ಅವರು ನಾನು ಹೇಳುವುದನ್ನು ಕೇಳಿಸಿಕೊಳ್ಳಿ ಹಿಂದೆ ಇದೇ ರೀತಿ ಮೂರ್ನಾಲ್ಕು ಬಾರಿ ಇದೇ ರೀತಿಯ ಪ್ರಸಂಗಳು ನಡೆದಾಗ ಎಚ್ಚರಿಕೆ ನೀಡಿದ್ದೇನೆ,ಅಸಂಸದೀಯ ಪದ ಬಳಕೆ ಮಾಡಿರುವುದು ಅಕ್ಷಮ್ಯ ಅಪರಾಧ ಇದು ಸದನದ ಒಕ್ಕೊರಲ ಅಭಿಪ್ರಾಯವಾಗಿದೆ.
ದೇಶದ ಪ್ರಧಾನಿ ಬಗ್ಗೆ ಅಸಂಸದೀಯ ಪದ ಬಳಕೆ ಸರಿಯಲ್ಲ, ಬೇಷರತ್ ಕ್ಷಮೆ ಕೋರಿ ಸದನದ ಸುಗಮ ಕಲಾಪಕ್ಕೆ ಅವಕಾಶ ನೀಡಬೇಕು ಎಂದು ರೂಲಿಂಗ್ ನೀಡಿದರು.
ಪ್ರತಿಪಕ್ಷ ಸದಸ್ಯರು ಪ್ರಚೋದನೆ ಮಾಡಿದರು,ಸಿಟಿ ರವಿ ಪಾಕಿಸ್ತಾನದ ನಾಲಿಗೆ ಅದಕ್ಕೆ ಇರಬೇಕು ಈ ರೀತಿಯಲ್ಲಿ ಮಾತನಾಡಿದ್ದಾರೆ ಎಂದು ಹೇಳಿದ್ದಾರೆ ಮೊದಲು ಅದರ ಬಗ್ಗೆ ಕ್ಷಮೆಯಾಚಿಸಲಿ, ನಂತರ ನೋಡೋಣ ಬೇರೆ ಸದಸ್ಯರ ಪ್ರಚೋದನೆದಿಂದ ಮಾತನಾಡಿದ್ದೇನೆ ಎಂದು ನಸೀರ್ ಅಹಮದ್ ಹೇಳಿದರು.
ಇದನ್ನು ಒಪ್ಪದ ಪ್ರತಿಪಕ್ಷಗಳ ಸದಸ್ಯರು ಒಂದೇ ವಾಕ್ಯದಲ್ಲಿ ಕ್ಷಮೆ ಕೇಳಬೇಕು ಅದನ್ನು ಬಿಟ್ಟು ವಿವರಣೆ ಬೇಕಾಗಿಲ್ಲ ಅವರು ಕ್ಷಮೆ ಕೇಳಲಿ ಇಲ್ಲವೇ ಹೊರಹಾಕಿ ಎಂದು ಆಗ್ರಹಿಸಿದರು.
ಆಗ ಮಧ್ಯ ಪ್ರವೇಶಿಸಿದ ಸಭಾನಾಯಕ ಭೋಸರಾಜ್ ಅವರು ಮೊದಲು ನಸೀರ್ ಅಹಮದ್ ಅವರು ಏನು ಹೇಳಲಿದ್ದಾರೆ ನೋಡೋಣ ಅನಂತರ ತೀರ್ಮಾನ ಮಾಡೋಣ ಎಂದರು.
ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಮೊದಲು ಕ್ಷಮೆ ಕೇಳಲಿ ಅದನ್ನು ಬಿಟ್ಟು ಯಾವುದಕ್ಕೂ ಅವಕಾಶ ನೀಡುವುದಿಲ್ಲ ಎಂದಾಗ ಸದನದಲ್ಲಿ ಮಾತಿನ ಚಕಮಕಿ ನಡೆದು ಸದನವನ್ನು ಸಭಾಪತಿಗಳು ಕೆಲಕಾಲ ಮುಂದೂಡಿದರು.



ಬಳಿಕ ಸದನ ಅರಂಭಗೊಂಡ ಬಳಿಕ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ದೇಶದ್ರೋಹಿ ಪದ ಬಳಕೆ ಮಾಡಿರುವ ನಸೀರ್ ಅಹಮದ್ ವಿಷಾದ ವ್ಯಕ್ತಪಡಿಸಿ ಸದನದ ಸುಗಮ ಕಲಾಪಕ್ಕೆ ಅವಕಾಶ ನೀಡಬೇಕು ಎಂದರು.ಈ ವೇಳೆ ಸಿಟಿ ರವಿ ಪಾಕಿಸ್ತಾನದ ನಾಲಿಗೆ ಅದಕ್ಕೆ ಇರಬೇಕು ಈ ರೀತಿಯಲ್ಲಿ ಮಾತನಾಡಿದ್ದಾರೆ ಎಂದು ಹೇಳಿರುವ ಸಂಬಂಧ ಕ್ಷಮೆಯಾಚಿಸಬೇಕು ಎಂದು ಸದಸ್ಯ ಸಲೀಂ ಅಹಮದ್ ಅವರು ಪತ್ರ ನೀಡಿರುವುದನ್ನು ಪ್ರಸ್ತಾಪಿಸಿ ಸಿಟಿ ರವಿ ಅವರ ವಿಷಾದಕ್ಕೆ ಆಗ್ರಹಿಸಿದರು.
ಸಭಾಪತಿ ಹೊರಟ್ಟಿ ಅವರು ಮಾಡಿದ ವಿನಂತಿಯಂತೆ ಸದಸ್ಯ ನಸೀರ್ ಅಹಮದ್ ಅವರು ಪ್ರಧಾನಿಗಳ ಬಗ್ಗೆ ನೀಡಿದ ಹೇಳಿಕೆ ಸಂಬಂಧ ವಿಷಾದ ವ್ಯಕ್ತಪಡಿಸಿದರು
ಬಳಿಕ ಆಡಳಿತ ಪಕ್ಷದ ಸದಸ್ಯರು ಸಿವಿ ರವಿ ಅವರ ವಿಷಾದಕ್ಕೆ ಪಟ್ಟು ಹಿಡಿದಾಗ ವಿರೋ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿ ವಿಪಕ್ಷದ ಸದಸ್ಯರು ಸಿಟಿ ರವಿ ಯಾರ ಹೆಸರನ್ನು ಬಳಸದೇ ಹಿನ್ನೆಲೆಯಲ್ಲಿ ವಿಷಾದ ವ್ಯಕ್ತಪಡಿಸುವುದಿಲ್ಲ ಬದಲಾಗಿ ಅವರು ಬಳಸಿದ ಪದ ಕಡತದಿಂದ ತೆಗೆಯುವಂತೆ ಸಭಾಪತಿಗಳನ್ನು ಆಗ್ರಹಿಸಿದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE